2017 ಕ.ತೀ.ವ 1324

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ

## ಶ್ರೀಮತಿ ಶೈಲಜಾ ಮತ್ತು ಮತ್ತೊಬ್ಬರು –ವಿರುದ್ಧ– ಪೊಲೀಸು ಅಧೀಕ್ಷಕರು, ಲೋಕಾಯುಕ್ತ ಮತ್ತು ಮತ್ತೊಬ್ಬರು*

**ದಂಡ ಪ್ರಕ್ರಿಯಾ ಸಂಹಿತೆ ಕಲಂ 401ರ ಜೊತೆಗೋದಿದಂತೆ ಕಲಂ 397(1)ರಡಿಯಲ್ಲಿ ಕ್ರಿಮಿನಲ್ ಪುನರೀಕ್ಷಣಾ ಅರ್ಜಿಗಳು.**

**ಎರಡನೇ ಎದುರುದಾರರು ಸಲ್ಲಿಸಿದ ಖಾಸಗಿ ಫಿರ್ಯಾದನ್ನಾಧರಿಸಿ ವಿಶೇಷ ನ್ಯಾಯಾಲಯವು ಪ್ರಕರಣದ ಸಂಜ್ಞೇಯತೆಯನ್ನು ತೆಗೆದುಕೊಂಡು ಅರ್ಜಿದಾರರ ವಿರುದ್ಧ ಸಮನ್ಸ್ ನೀಡಿದ ಕ್ರಮವನ್ನು ಪ್ರಶ್ನಿಸಿ ಆರೋಪಿತರಿಂದ ಪ್ರತ್ಯೇಕ ಪುನರೀಕ್ಷಣಾ ಅರ್ಜಿಗಳ ಸಲ್ಲಿಕೆ.**

**ಸರ್ಕಾರದ ಪೂರ್ವಾನುಮತಿ ಪಡೆಯದೇ ಪ್ರಕರಣದ ಸಂಜ್ಞೇಯತೆಯನ್ನು ಪಡೆದು ವಿಶೇಷ ನ್ಯಾಯಾಲಯವು ಆದೇಶವನ್ನು ನೀಡಿದೆ. ಹಾಗೆಯೇ ದಂಡ ಪ್ರಕ್ರಿಯಾ ಸಂಹಿತೆ ಕಲಂ 200ರನ್ವಯ ಯಾವುದೇ ವಿಚಾರಣೆಯನ್ನು ಕೈಗೊಳ್ಳದೆ ಮತ್ತು ವಿವೇಚನೆಯಿಲ್ಲದೇ ವಿಶೇಷ ನ್ಯಾಯಾಲಯವು ಸಮನ್ಸ್ ನೀಡಿ ಆದೇಶಿಸಿರುತ್ತದೆಂದು ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಈ ಎಲ್ಲ ಕಾರಣಗಳಿಂದ ಪುನರೀಕ್ಷಣಾ ಅರ್ಜಿಗಳನ್ನು ಪುರಸ್ಕರಿಸಿದ ಉಚ್ಚ ನ್ಯಾಯಾಲಯವು ಪ್ರಕರಣವನ್ನು ಹೊಸದಾಗಿ ಬಗೆಹರಿಸುವಂತೆ ವಿಶೇಷ ನ್ಯಾಯಾಲಯಕ್ಕೆ ಆದೇಶಿಸಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾಗಳಲ್ಲಿ*** |
|---|---|
| *1. (2012) 2 ಎಸ್‌ಸಿಸಿ 731) ವಾಸಂತಿ ದುಬೆ –ವಿರುದ್ಧ– ಮಧ್ಯ ಪ್ರದೇಶ ರಾಜ್ಯ* | *(ಉಲ್ಲೇ) 3* |

*ಕ್ರಿಮಿನಲ್ ಪುನರೀಕ್ಷಣಾ ಅರ್ಜಿ ಸಂಖ್ಯೆ: 473/2012 ಇದರೊಂದಿಗೆ ಇತರೆ, ದಿನಾಂಕ: 2ನೇ ಜನವರಿ, 2017.

2. (2015)4 ಎಸ್‌ಸಿಸಿ 609
ಸುನೀಲ್ ಭಾರತಿ ಮಿತ್ತಲ್ –ವಿರುದ್ಧ–
ಕೇಂದ್ರ ತನಿಖಾ ದಳ (ಉಲ್ಲೇ) 3
3. (2013)4 ಎಸ್‌ಸಿಸಿ 505
ಶ್ರೀಮತಿ ಜಿಐಚ್‌ಸಿಎಲ್ ನೌಕರರ ದಾಸ್ತಾನು ಆಯ್ಕೆ ಟ್ರಸ್ಟ್
–ವಿರುದ್ಧ– ಶ್ರೀಮತಿ ಇಂಡಿಯಾ ಇನ್ಫೋಲೈನ್ ಲಿಮಿಟೆಡ್ (ಉಲ್ಲೇ) 3
4. (2009) 6 ಎಸ್‌ಸಿಸಿ 587
ಎ ಸುಭೈರ್ –ವಿರುದ್ಧ– ಕೇರಳ ರಾಜ್ಯ (ಉಲ್ಲೇ) 3
5 (1999) 6 ಎಸ್‌ಸಿಸಿ 667
ಸಾಮಾನ್ಯ ವ್ಯಾಜ್ಯಗಳು –ವಿರುದ್ಧ– ಭಾರತ ಒಕ್ಕೂಟ (ಉಲ್ಲೇ) 3
6. ಎಐಆರ್ 1984 ಎಸ್‌ಸಿ 718
ಎ.ಅರ್ ಅಂತುಲೆ –ವಿರುದ್ಧ–
ರಾಮ್‌ದಾಸ್ ಶೀನಿವಾಸ್ ನಾಯರ್ ಮತ್ತು ಮತ್ತೊಬ್ಬರು (ಉಲ್ಲೇ) 3
7. ಎಐಆರ್ 1999 ಎಸ್‌ಸಿ 1028
ರಾಜೇಂದ್ರ ಕುಮಾರ್ ಸೀತಾರಾಮ್ ಪಾಂಡೆ ಮತ್ತು ಇತರರು
–ವಿರುದ್ಧ– ಉತ್ತಮ್ ಮತ್ತು ಮತ್ತೊಬ್ಬರು (ಉಲ್ಲೇ) 9
8. (2013) 15 ಎಸ್ ಸಿ 624
ಊರ್ಮಿಳಾ ದೇವಿ –ವಿರುದ್ಧ– ಯುಧವೀರ್ ಸಿಂಗ್ (ಉಲ್ಲೇ) 10
9. (2012) 3 ಎಸ್‌ಸಿಸಿ 64
ಸುಬ್ರಮಣಿಯನ್ ಸ್ವಾಮಿ –ವಿರುದ್ಧ–
ಮನಮೋಹನ್ ಸಿಂಗ್ ಮತ್ತು ಇತರರು (ಉಲ್ಲೇ) 13
10. ಸಿಬಿಐ (2016) ಎಸ್‌ಸಿಸಿ 143
ಎನ್.ಕೆ. ಗಂಗೂಲಿ –ವಿರುದ್ಧ– ಸಿಬಿಐ (ಉಲ್ಲೇ) 13
11. (2011)7 ಎಸ್‌ಸಿಸಿ 14
ಅಭಯ್ ಸಿಂಗ್ ಚೌಟಾಲ –ವಿರುದ್ಧ– ಸಿಬಿಐ (ಉಲ್ಲೇ) 13

*12. (1989) (2) ಎಸ್‌ಸಿಸಿ 132*
*ಇಂಡಿಯಾ ಕಾರಟ್ (ಪ್ರೈ) ಲಿಮಿಟೆಡ್ –ವಿರುದ್ಧ–*
*ಕರ್ನಾಟಕ ರಾಜ್ಯ (ಉಲ್ಲೇ) 14*
*13. (2003) 12 ಎಸ್‌ಸಿಸಿ 129*
*ಒರಿಸ್ಸಾ ರಾಜ್ಯ –ವಿರುದ್ಧ – ಹಬೀಬುಲ್ಲಾ ಖಾನ್ (ಉಲ್ಲೇ) 15*
*14. 1998 (5) ಎಸ್‌ಸಿಸಿ 749*
*ಪೆಪ್ಸಿ ಫುಡ್ ಲಿಮಿಟೆಡ್ –ವಿರುದ್ಧ–*
*ಜುಡಿಶಿಯಲ್ ಮಾಜಿಸ್ಟ್ರೇಟ್ (ಉಲ್ಲೇ) 19*
*15. (2015)12 ಎಸ್‌ಸಿಸಿ 420*
*ಮಹಮದ್ ಯುಎಲ್ ರೆಹಮಾನ್ –ವಿರುದ್ಧ–*
*ಖಯ್ಯೀರ್ ಮಹಮದ್ ತುಂಡಾ ಮತ್ತು ಇತರರು (ಉಲ್ಲೇ) 22*

1ನೇ ಅರ್ಜಿದಾರರ ಪರವಾಗಿ: ಶ್ರೀ ಮೂರ್ತಿ ದಯಾನಂದ್ ನಾಯಕ್, ವಕೀಲರು – ಇವರ ಪರ ಶ್ರೀ ಸಿ.ವಿ. ನಾಗೇಶ್, ಹಿರಿಯ ವಕೀಲರು.
2ನೇ ಸಂಖ್ಯೆಯ ಅರ್ಜಿದಾರರ ಪರವಾಗಿ ಶ್ರೀ ಎಚ್.ಎಸ್. ಚಂದ್ರಮೌಳಿ, ವಕೀಲರು ಶ್ರೀ ಹರೀಶ್ ಭಂಡಾರಿ, ವಕೀಲರು.
ಪ್ರತ್ಯರ್ಜಿದಾರರ ಪರವಾಗಿ: ಎದುರುದಾರ ಸಂಖ್ಯೆ – 1 ಲೋಕಾಯುಕ್ತ ಪರವಾಗಿ ಶ್ರೀ ಬಿ.ಎಸ್. ಪ್ರಸಾದ್, ವಿಶೇಷ ಸರ್ಕಾರಿ ಅಭಿಯೋಜಕರು.
2ನೇ ಪ್ರತ್ಯರ್ಜಿದಾರರ ಪರವಾಗಿ: ಶ್ರೀ ಪಿ.ನ್. ಹೆಗ್ಡೆ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ:**

2ನೇ ಎದುರುದಾರರು ಸಲ್ಲಿಸಿದ ಖಾಸಗಿ ದೂರಿನಲ್ಲಿ ಆಪಾದಿತ ವ್ಯಕ್ತಿಗಳೆಂದು ಪಟ್ಟಿಮಾಡಲಾದ ಮನರ್ ಪರಿಶೀಲನಾ ಅರ್ಜಿದಾರರು ಅಪರಾಧ ಸಂಜ್ಞೇಯತೆಯನ್ನು ತೆಗೆದುಕೊಂಡು ತಮಗೆ ಸಮನ್ಸುಗಳನ್ನು ಹೊರಡಿಸಲಾದ ವಿಶೇಷ ನ್ಯಾಯಾಧೀಶರ ಆದೇಶವನ್ನು ಪ್ರಶ್ನಿಸಿರುತ್ತಾರೆ.

2. ಸಂಕ್ಷಿಪ್ತವಾಗಿ ಹೇಳುವುದಾದರೆ, ಎರಡನೇ ಎದುರುದಾರನು, ನಾಲ್ಕು ಜನ ಆಪಾದಿತ ವ್ಯಕಿಗಳ ವಿರುದ್ಧ ದೂರನ್ನು ಸಲ್ಲಿಸಿದ್ದಾರೆ. ಮೊದಲನೇ ಆಪಾದಿತ ವ್ಯಕ್ತಿಯು ಕರ್ನಾಟಕದ ಮಾಜಿ ಉಪ ಮುಖ್ಯಮಂತ್ರಿ/ಮುಖ್ಯಮಂತ್ರಿಗಳಾಗಿದ್ದಾರೆ. ಎರಡನೇ ಆಪಾದಿತರು, ವಿಧಾನ ಪರಿಷತ್ ಸದಸ್ಯರು ಮತ್ತು ಕರ್ನಾಟಕ ಸರ್ಕಾರದ ಮಾಜಿ ಸಚಿವರಾಗಿದ್ದಾರೆ ಮತ್ತು ನಾಲ್ಕನೇ ಆಪಾದಿತರು ಸ್ಥಿರಾಸ್ತಿಗಳ ಭೂ ಮಾಲೀಕನಾಗಿದ್ದು ಅದನ್ನು ಅಧಿಸೂಚನೆಯಿಂದ ತೆಗೆದು ಹಾಕಿರುವುದನ್ನು ಪ್ರಶ್ನಿಸಿರುತ್ತಾರೆ. ಮಾನ್ಯ ವಿಶೇಷ ನ್ಯಾಯಾಧೀಶರು, ಮೊದಲ ಎದುರುದಾರ / ಲೋಕಾಯುಕ್ತ ಪೋಲಿಸರಿಗೆ ತನಿಖೆಗಾಗಿ ವಿಷಯವನ್ನು ಕಳುಹಿಸಿದ್ದಾರೆ. ತನಿಖೆಯನ್ನು ನಡೆಸಿದ ನಂತರ, ತನಿಖಾಧಿಕಾರಿಯು ದೂರು ಆಪಾದನೆಯನ್ನು ಬೆಂಬಲಿಸುವ ಯಾವುದೇ ಸಾಕ್ಷ್ಯ ದಸ್ತಾವೇಜಿಯ ರುಜುವಾತು ಇಲ್ಲದಿದ್ದುದರಿಂದ 'ಬಿ' ಅಂತಿಮ ವರದಿಯನ್ನು ಸಲ್ಲಿಸಿದರು. ಮಾನ್ಯ ವಿಶೇಷ ನ್ಯಾಯಾಧೀಶರು ಅಂತಿಮ ವರದಿಯನ್ನು ತಿರಸ್ಕರಿಸಿ ಭಾರತೀಯ ದಂಡ ಸಂಹಿತೆಯ 120 'ಬಿ' ಪ್ರಕರಣದೊಂದಿಗೆ ಓದಲಾದ 406, 409, 420, 463, 464, 468ನೇ ಪ್ರಕರಣಗಳ ಮೇರೆಗಿನ, ಭ್ರಷ್ಟಾಚಾರ ತಡೆ ಅಧಿನಿಯಮದ (ಸಂಕ್ಷಿಪ್ತತೆಗಾಗಿ ಅಧಿನಿಯಮ) 13(2)ನೇ ಪ್ರಕರಣಗಳೊಂದಿಗೆ ಓದಲಾದ 13(1) (ಸಿ) ಮತ್ತು (ಡಿ) ಪ್ರಕರಣಗಳ ಮೇರೆಗೆ ಮತ್ತು ಕರ್ನಾಟಕ ಭೂ (ನಿರ್ಬಂಧ ಮತ್ತು ವರ್ಗಾವಣೆ) ಅಧಿನಿಯಮ, 1991ರ (ಸಂಕ್ಷಿಪ್ತತೆಗಾಗಿ ಕೆ.ಎಲ್.ಆರ್.ಟಿ ಅಧಿನಿಯಮ) 9ನೇ ಪ್ರಕರಣಗಳೊಂದಿಗೆ ಓದಲಾದ 3, 4 ಮತ್ತು 5ನೇ ಪ್ರಕರಣಗಳ ಮೇರೆಗಿನ ಅಪರಾಧಗಳಿಗೆ ಸಂಬಂಧಿಸಿದಂತೆ ಸಂಜ್ಞೇಯತೆಯನ್ನು ತೆಗೆದುಕೊಂಡಿದ್ದಾರೆ.

3. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ವಕೀಲರಾದ ಶ್ರೀ.ಸಿ.ವಿ. ನಾಗೇಶ್‌ರವರು, ಅಂತಿಮ ವರದಿಯನ್ನು ದಿನಾಂಕ 21.03.2012 ರಂದು ಸಲ್ಲಿಸಲಾಗಿತ್ತೆಂದು ನಿವೇದಿಸಿದ್ದಾರೆ, ಅದೇ ದಿನದಂದು ದೂರುದಾರನು ಮೆಮೋವನ್ನು ಸಲ್ಲಿಸಿದ್ದು, 21.03.2012 ರಂದು ಚುನಾವಣೆ ನಡೆಸಿದ್ದರು ಮತ್ತು ವಿಷಯವನ್ನು 29.03.2012ಕ್ಕೆ ಮುಕ್ತಾಯಗೊಳಿಸಲಾಗಿತು. ದಿನಾಂಕ 29.03.2012 ರಂದು 13.04.2012 ರ ಆದೇಶಗಳಿಗಾಗಿ ಮೀಸಲಿಡಲಾಗಿತ್ತು. ಆದಾಗ್ಯೂ, ದೂರುದಾರನು

05.04.2012 ಕ್ಕೆ ಪ್ರಕರಣವನ್ನು ಮುಂಗಡವಾಗಿ ತೆಗೆದುಕೊಂಡು ಆಲಿಸಿದ್ದರು. ದಿನಾಂಕ 13.04.2012 ರಂದು ಮಾನ್ಯ ವಿಶೇಷ ನ್ಯಾಯಾಧೀಶರು ಅಂತಿಮ ವರದಿಯನ್ನು ತಿರಸ್ಕರಿಸಿ ಅರ್ಜಿದಾರರು ಮತ್ತು ಇತರರ ವಿರುದ್ಧ ಸಂಜ್ಞೇಯತೆ ತೆಗೆದುಕೊಂಡು 30.04.2012ರ ಮೂಲಕ ಪ್ರತ್ಯುತ್ತರನ್ನು ಕಳುಹಿಸಬೇಕಾದ ಸಮನುಗಳನ್ನು ಹೊರಡಿಸಿದರು. ಮಾನ್ಯ ನ್ಯಾಯಾಧೀಶರು, ನೇರವಾಗಿ ಸಮನುಗಳನ್ನು ಹೊರಡಿಸುವಲ್ಲಿ ಸಂಹಿತೆಯ 200 ಮತ್ತು 202ನೇ ಪ್ರಕರಣಗಳ ಮೇರೆಗೆ ರೂಪಿಸಲಾದ ಆಜ್ಞಾಪಕ ಪ್ರಕ್ರಿಯೆಯನ್ನು ಅನುಸರಿಸಿರುವುದಿಲ್ಲ. ದೂರುದಾರನು, ಆಕ್ಷೇಪಣಾ ಅರ್ಜಿಯನ್ನು ಸಲ್ಲಿಸಿದ್ದುರಿಂದ. ಅದನ್ನು ಖಾಸಗಿ ದೂರು ಎಂದು ಪರಿಭಾವಿಸಬೇಕಾಗಿತ್ತು ಮತ್ತು ಸಂಹಿತೆಯ ಅಧ್ಯಾಯ 5ರಲ್ಲಿ ಉದ್ದೇಶಿಸಲಾದ ಆಜ್ಞಾಪಕ ಪ್ರಕ್ರಿಯೆಯನ್ನು ಅನುಸರಿಸಲೇಬೇಕಾಗಿತ್ತು. ಪ್ರಶ್ನಿತ ಆದೇಶದ ವಿಷಯದಲ್ಲಿನ ಚರ್ಚೆಯು, ಮಾನ್ಯ ನ್ಯಾಯಾಧೀಶರು ಸಂಜ್ಞೇಯತೆಯನ್ನು ತೆಗೆದುಕೊಂಡಿದ್ದಾರೆಂಬುದನ್ನು ಪ್ರತಿಬಿಂಬಿಸುವುದಿಲ್ಲ. ಹಾಗೆಯೇ ದೂರುದಾರನು ಅಧಿನಿಯಮ 19 ನೇ ಪ್ರಕರಣದ ಮೇರೆಗೆ ಮತ್ತು ಸಂಹಿತೆಯ 197ನೇ ಪ್ರಕರಣದ ಮೇರೆಗೆ ಪೂರ್ವಾನುನೋದನೆಯನ್ನು ಪಡೆದುಕೊಳ್ಳದಿದ್ದುರಿಂದ ತನಿಖೆಗೆ ಸಂಬಂಧಿಸಿದ ದೂರಿನ ಅದೇ ಪರಾಮರ್ಶೆಯು ಕಾನೂನಿನಲ್ಲಿ ದೋಷಯುಕ್ತವಾಗಿರುತ್ತದೆ. 2ನೇ ಸಂಖ್ಯೆಯ ಅರ್ಜಿದಾರನು ಅಧಿನಿಯಮ 2(ಸಿ) ಪ್ರಕರಣದ ಮತ್ತು ಭಾರತೀಯ ದಂಡ ಸಂಹಿತೆಯ 21ನೇ ಪ್ರಕರಣದ ಅಡಿಯಲ್ಲಿ ಬರುವ 'ಲೋಕ ನೌಕರ'ನಾಗಿದ್ದಾನೆ. ಹೀಗಾಗಿ ಸಂಪೂರ್ಣ ಪ್ರಕ್ರಿಯೆ ದೋಷಯುಕ್ತವಾಗಿದೆ. ಹಾಗಿಲ್ಲದೇ ಹೋದರೂ ಕೂಡ ದೂರು ಆಪಾದನೆಯನ್ನು ಅರ್ಜಿದಾರರ ವಿರುದ್ಧ ಯಾವುದೇ ಅಪರಾಧವನ್ನು ರೂಪಿಸಲಾಗುವುದಿಲ್ಲ. ಪ್ರಶ್ನಿತ ಅಪರಾದಕ್ಕೆ ಯಾವ ರೀತಿಯಲ್ಲೂ ಅವರು ಸಂಬಂಧಪಡುವುದಿಲ್ಲ. ದೂರು ಆಪಾದನೆಗಳು ಅಸಂಬದ್ಧ ಹಾಗೂ ಮೂಲದಲ್ಲೇ ಅಸಂಭವನೀಯು ವಾಗಿರುವಂಥವಾಗಿವೆ. ಪ್ರಶ್ನಿತ ಆದೇಶವನ್ನು ಯಾವುದೇ ವಿವೇಚನೆ ಮಾಡದೇ ಯಾಂತ್ರಿಕವಾಗಿ ಹೊರಡಿಸಿದ್ದಾರೆ. ಆದುದರಿಂದ ವ್ಯವಹರಣೆಗಳ ಮುಂದುವರಿಕೆಯು, ನ್ಯಾಯಾಲಯದ ಪ್ರಕ್ರಿಯೆಯನ್ನು ದುರುಪಯೋಗಪಡಿಸಿಕೊಳ್ಳುವಂತಿದೆ ಮತ್ತು ಅರ್ಜಿದಾರರು, ಅನಗತ್ಯವಾಗಿ ವಿಶೇಷ ನ್ಯಾಯಾಲಯದ ಮುಂದೆ ಅಧಿವಿಚಾರಣೆಯನ್ನು ಎದುರಿಸುವ ಸತ್ವಪರೀಕ್ಷೆಗೆ ಒಳಪಡಬೇಕಾಗಿದೆ.

ಮಾನ್ಯ ಹಿರಿಯ ವಕೀಲರು, ***ವಾಸಂತಿ ದುಬೆ –ವಿರುದ್ಧ– ಮಧ್ಯ ಪ್ರದೇಶ ರಾಜ್ಯ***[1], ಪ್ರಕರಣದಲ್ಲಿ ಸ್ಪಷ್ಟವಾಗಿ ನಮೂದಿಸಲಾದ ಕಾನೂನಿನ ಪ್ರಕಾರ, ವಿಚಾರಣೆಯನ್ನು ನಡೆಸಿದ ನಂತರವಷ್ಟೆ ಮಾನ್ಯ ಅಧಿವಿಚಾರಣಾ ನ್ಯಾಯಾಲಯವು, ವಿಷಯದಲ್ಲಿನ ವ್ಯವಹರಣೆಯ ಉದ್ದೇಶಕ್ಕಾಗಿ ದೂರುದಾರನು ವ್ಯಾಜ್ಯವನ್ನು ನಡೆಸಬೇಕೆ ಎಂಬ ಅಭಿಪ್ರಾಯವನ್ನು ರೂಪಿಸಬೇಕಾಗುತ್ತದೆ ಎಂದು ನಿವೇದಿಸಿದ್ದಾರೆ. ಹೀಗಾಗಿ ಯುಕ್ತ ನ್ಯಾಯಿಕ ವಿವೇಚನೆಯನ್ನು ಮಾಡದೇ ***ಸುನೀಲ್ ಭಾರತಿ ಮಿತ್ತಲ್ –ವಿರುದ್ಧ – ಕೇಂದ್ರ ತನಿಖಾ ದಳ***[2] ಮತ್ತು ***ಮೆ॥ ಜಿಎಚ್‌ಸಿಎಲ್ ನೌಕರರ ದಾಸ್ತಾನು ಆಯ್ಕೆ ಟ್ರಸ್ಟ್ – ವಿರುದ್ಧ– ಮೆ॥ ಇಂಡಿಯಾ ಇನ್ಫೋಲೈನ್ ಲಿಮಿಟೆಡ್***[3], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ವಿಧಿಸಲಾದ ತತ್ವಗಳ ವಿರುದ್ಧ ಪ್ರಶ್ನಿತ ಆದೇಶವನ್ನು ಹೊರಡಿಸಿದೆ.

ತನಿಖಾಧಿಕಾರಿಯು ಅವನ ತನಿಖೆಯ ಅವಧಿಯ ಸಂದರ್ಭದಲ್ಲಿ ಸಂಗ್ರಹಿಸಲಾದ ದಸ್ತಾವೇಜುಗಳನ್ನು ಅಧಿವಿಚಾರಣಾ ನ್ಯಾಯಾಲಯವು ಅವಲೋಕಿಸಿಲ್ಲ. ಅದರ ರಾಜ್ಯಪತ್ರ ಅಧಿಸೂಚನೆಯಲ್ಲಿ. ನಾಲ್ಕನೇ ಆರೋಪಿಯಾದ ಲಿಂಗಯ್ಯನವರ ಹೆಸರನ್ನು ತಿಳಿಸಲಾಗಿದ್ದು, ಐತೀರ್ಪನ್ನೂ ಸಹ ಲಿಂಗಯ್ಯನವರ ಹೆಸರಿನಲ್ಲಿ ಹೊರಡಿಸಲಾಗಿದೆ. ಬಿಡಿಎ ವರದಿಗಳ ಸ್ಥಿತಿಗತಿಯ ಪ್ರಕಾರ, ನಾಗದೇವನಹಳ್ಳಿಯ ನಿವೇಶನ ಸಂಖ್ಯೆ 77 ಮತ್ತು 78 ರಲ್ಲಿ ಜಮೀನಿನಲ್ಲಿ ಕೆಲವು ನಿರ್ಮಿತಿಗಳು ಮೇಲೆದ್ದಿವೆ. ಕೆಲವು ನಿರ್ಮಿತಿಗಳನ್ನು ಸಂಬಂಧಪಟ್ಟ ಪ್ರಾಧಿಕಾರ ಅಧಿಕೃತಗೊಳಿಸಿದ್ದು, ಜಮೀನಿನಲ್ಲಿರುವ ನಿರ್ಮಿತಿಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಟ್ರಸ್ಟ್ ನಡೆಸುತ್ತಿದೆ. ನಾಗದೇವನಹಳ್ಳಿ ನಿವೇಶನ ಸಂಖ್ಯೆ 77 ಮತ್ತು 78 ರಲ್ಲಿರುವ ಹೆಚ್ಚಿನ ವಿಸ್ತಾರದ ಜಮೀನನ್ನು ಈಗಾಗಲೇ ಅಧಿಸೂಚನೆಯಿಂದ ತೆಗೆದುಹಾಕಲಾಗಿದ್ದು, ಪ್ರಶ್ನಿತ ಜಮೀನನ್ನು ಬಿಡಿಎಯು ಪಡೆದುಕೊಳ್ಳಲು ಸಾಧ್ಯವಿಲ್ಲ. ಸ್ವಾಧೀನಪಡಿಸಿಕೊಂಡ ಜಮೀನು ಅರ್ಜಿದಾರನಲ್ಲಿ ಇರುವುದರಿಂದ, ಸರ್ಕಾರವು ತನ್ನ ಬುದ್ಧಿವಂತಿಕೆಯಿಂದ ಭೂ ಆರ್ಜನಾ ಆಧಿನಿಯಮದ 48ನೇ ಪ್ರಕರಣದ ಮೇರೆಗೆ ತನಗೆ ಪ್ರದತ್ತವಾದ

1. (2012) 2 ಎಸ್‌ಸಿಸಿ 731
2. (2015) 4 ಎಸ್‌ಸಿಸಿ 609
3. (2013) 4 ಎಸ್‌ಸಿಸಿ 505

ಅಧಿಕಾರವನ್ನು ಚಲಾಯಿಸಿ, ಜಮೀನನ್ನು ಅಧಿಸೂಚನೆಯಿಂದ ತೆಗೆದುಹಾಕಿದೆ. ಅಧಿಸೂಚನೆಯಿಂದ ತೆಗೆದುಹಾಕಲಾದ ಸದರಿ ಆದೇಶವನ್ನು ಈವರೆಗೆ ಯಾವುದೇ ವೇದಿಕೆಯ ಮುಂದೆಯೂ ಪ್ರಶ್ನಿಸಿಲ್ಲ. ಕಂದಾಯ ದಾಖಲೆಗಳಲ್ಲಿ ಮತ್ತು ಪ್ರಾರಂಭಿಕ ಅಧಿಸೂಚನೆಯಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ 16(2)ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವವರೆಗೆ ಭೂ ಮಾಲೀಕನ ಹೆಸರು ಇದ್ದುದರಿಂದ, ಅಧಿಸೂಚನೆಯಿಂದ ತೆಗೆದುಹಾಕುವ ಆದೇಶದ ಸಂಬಂಧದಲ್ಲಿ ಅವನ ಪ್ರಯತ್ನಗಳನ್ನು ಮುಂದುವರೆಸುವಲ್ಲಿ ಅವನ ಕಡೆಯಿಂದ ಯಾವುದೇ ಕಾನೂನುಬಾಹಿರತೆ ಇರಲಿಲ್ಲ. ಅಧಿಸೂಚನೆಯಿಂದ ತೆಗೆದುಹಾಕುವ ಸಮಿತಿಯು ಶಾಸನಬದ್ಧ ಸಮಿತಿಯಾಗಿಲ್ಲ, ಇದೊಂದು ಶಿಫಾರಸ್ಸು ಮಾಡುವ ನಿಕಾಯವಾಗಿದೆ ಅಷ್ಟೇ ಅಧಿವಿಚಾರಣಾ ನ್ಯಾಯಾಲಯವು, ತಾನೇ, ಭೂ ಅರ್ಜನಾ ಅಧಿನಿಯಮದ 48ನೇ ಪ್ರಕರಣದ ಮೇರೆಗೆ ತನ್ನ ಅಧಿಕಾರಗಳನ್ನು ಚಲಾಯಿಸಲು ಪ್ರಾಧಿಕಾರಕ್ಕೆ ಕಾನೂನಿನ ಅಡಚಣೆ ಇರಲ್ಲಿಲ್ಲವೆಂದು ಅಭಿಪ್ರಾಯಪಟ್ಟಿದೆ. ಈ ರೀತಿಯ ಆಪಾದನೆಗಳನ್ನು ಮಾಡಿದ ನಂತರ ಕ್ರಿಮಿನಲ್ ಅರ್ಜಿ ಸಂಖ್ಯೆ 7274/2012 ಮತ್ತು ಸಂಬಂಧಪಟ್ಟ ಪ್ರಕರಣಗಳು ದಿನಾಂಕ 18.02.2015 ರಲ್ಲಿ (ಶ್ರೀ ಹಮೀದ್ ಅಲಿ –ವಿರುದ್ಧ– ಕಬ್ಬಾಳೇ ಗೌಡ ಮತ್ತು ಮತ್ತೊಬ್ಬರು) ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗಿನ ಅಧಿಕಾರವನ್ನು ಚಲಾಯಿಸಿ ಈ ನ್ಯಾಯಾಲಯವು ವಿಶೇಷ ನ್ಯಾಯಾಧೀಶರು ತಗೆದುಕೊಂಡ ಸಂಜ್ಞೇಯತೆಯನ್ನು ವಜಾಗೊಳಿಸಿತ್ತು. ಅಧಿನಿಯಮದ 13(1)(ಡಿ) ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವುದಕ್ಕೆ ಸಂಬಂಧಿಸಿದಂತೆ ಅಧಿನಿಯಮದ 13(2)ನೇ ಪ್ರಕರಣದ ಮೇರೆಗಿನ ಅಪರಾಧಗಳನ್ನು ಸಮರ್ಥಿಸಲು ವರದಿಯಾದ ***ಎ. ಸುಬೈರ್ –ವಿರುದ್ಧ – ಕೇರಳ ರಾಜ್ಯ***[4] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಡಲಾದಂತೆ ಲೋಕ ನೌಕರನು ಮೌಲ್ಯಯುತ ವಸ್ತುವಿಗಾಗಿ ಅಥವಾ ಆರ್ಥಿಕ ಅನುಕೂಲಕ್ಕಾಗಿ ಬೇಡಿಕೆ ಅಥವಾ ಮನವಿಯನ್ನು ಸೂಚಿಸುವ ಸಂಗತಿ ಇರಲೇಬೇಕು. ಮುಖ್ಯವಾದ ಸಂಗತಿಯೇನೆಂದರೆ, ದೂರಿನಲ್ಲಿ ಕಾನೂನು ಬಾಹಿರ ಲಂಚದ ಬೇಡಿಕೆ ಮತ್ತು ಒಪ್ಪಿಗೆಯ ಆರೋಪ ಇರಲಿಲ್ಲ. ಭಾರತೀಯ ದಂಡ ಸಂಹಿತೆಯ 406 ಮತ್ತು

4. (2009) 6 ಎಸ್‌ಸಿಸಿ 587

420ನೇ ಪ್ರಕರಣಗಳ ಅಂಶಗಳಿದ್ದರೂ ಸಹ ಪ್ರಸ್ತುತ ಪ್ರಕರಣಗಳಲ್ಲಿ (***ಸಾಮಾನ್ಯ ವ್ಯಾಜ್ಯಗಳು –ವಿರುದ್ಧ– ಭಾರತ ಒಕ್ಕೂಟ*** [5], ದಲ್ಲಿ ನಂಬಿಕೆಯನ್ನು ಇಟ್ಟುಕೊಂಡಿದೆ) ಕೊರತೆಗಳಿವೆ.

ಮಾನ್ಯ ಹಿರಿಯ ವಕೀಲರು, ಮುಂದುವರಿದು ಸರ್ವೋಚ್ಚ ನ್ಯಾಯಾಲಯದ ಈ ಮುಂದಿನ ತೀರ್ಪುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹೊರಡಿಸಿದ ಸಮನುಗಳನ್ನು ಅಧಿನಿಯಮದ 19(3) (ಸಿ) ಪ್ರಕರಣದ ಅಥವಾ ಸಂಹಿತೆಯ 397(2)ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ವಾದಕಾಲೀನ ಆದೇಶವೆಂದು ಹೇಳಲು ಸಾಧ್ಯವಾಗುವುದಿಲ್ಲ.

*i) ಭಾಸ್ಕರ್ ಕೈಗಾರಿಕೆಗಳ ನಿಯಮಿತ –ವಿರುದ್ಧ– ಭಿವಾನಿ ಡೆನಿಮ್ ಮತ್ತು ಉಡುಪು ನಿಯಮಿತ ಮತ್ತು ಇತರರು. (2001) ಎಸ್.ಸಿ.ಸಿ. (ಕ್ರಿ) 1254)*

*ii) ಊರ್ಮಿಳಾ ದೇವಿ –ವಿರುದ್ಧ– ಯದುವೀರ್ ಸಿಂಗ್ (2013) 15 ಎಸ್‌ಸಿಸಿ 624) ಮತ್ತು*

*iii) ಪ್ರಭು ಚಾವ್ಲಾ –ವಿರುದ್ಧ– ರಾಜಸ್ಥಾನ ರಾಜ್ಯ ಮತ್ತು ಮತ್ತೊಬ್ಬರು (ಎಐಆರ್ 2016 ಎಸ್‌ಸಿ 4245).*

ಅರ್ಜಿದಾರರು, ಆರೋಪಗಳನ್ನು ರೂಪಿಸಿ, ಸೂಚಿಸಿರುವ ಆದೇಶವನ್ನು ಈ ಪುನರ್‌ಪರೀಶೀಲನಾ ಅರ್ಜಿಗಳಲ್ಲಿ ಪ್ರಶ್ನಿಸಿರುವುದಿಲ್ಲ. ಅದುದರಿಂದ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಂಡು ಪಿಸಿಆರ್ ಸಂಖ್ಯೆ. 25/2011ರಲ್ಲಿ ದಿನಾಂಕ 13.04.2012ರ ಮಾನ್ಯ ವಿಶೇಷ ನ್ಯಾಯಾಧೀಶರ ಆದೇಶ ಮತ್ತು ಆಪಾದಿತ ವ್ಯಕ್ತಿಗಳಿಗೆ ಸಮನುಗಳನ್ನು ಹೊರಡಿಸಿರುವುದನ್ನು ಪ್ರಶ್ನಿಸಿರುವುದರಿಂದ ಈ ಪುನರ್

5. (1999) 6 ಎಸ್‌ಸಿಸಿ 667

ಪರಿಶೀಲನಾ ಅರ್ಜಿಗಳನ್ನು ಸಮರ್ಥಿಸಿಕೊಳ್ಳಬಹುದಾಗಿದ್ದು, ಪ್ರಶ್ನಿತ ಆದೇಶವನ್ನು ತಳ್ಳಿಹಾಕಲು ತಕ್ಕುದಾಗಿದೆ.

4. ಲೋಕಾಯುಕ್ತ ಮಾನ್ಯ ವಿಶೇಷ ಅಭಿಯೋಜಕರಾದ ಶ್ರೀ. ಬಿ.ಎಸ್ ಪ್ರಸಾದ್‌ರವರು, ವಿಶೇಷ ನ್ಯಾಯಾಧೀಶರ ಆದೇಶವನ್ನು ಸಮರ್ಥಿಸಿದ್ದರೂ, ಅಧಿನಿಯಮದ ಮೇರೆಗಿನ ವ್ಯವಹರಣೆಗಳಲ್ಲಿ ಅಧಿಕಾರವ್ಯಾಪ್ತಿಯನ್ನು ಸೀಮಿತಗೊಳಿಸುವ ಭ್ರಷ್ಟಾಚಾರ ತಡೆಗಟ್ಟುವಿಕೆ ಅಧಿನಿಯಮದ 19(3)ನೇ ಪ್ರಕರಣಗಳಲ್ಲಿ ನಮೂದಿಸಲಾದ ನಿಷೇಧವನ್ನು ದೃಷ್ಟಿಯಲ್ಲಿಟ್ಟುಕೊಂಡು ಅರ್ಜಿಯನ್ನು ಸಮರ್ಥಿಸುವುದಕ್ಕೆ ತಾಂತ್ರಿಕ ಆಕ್ಷೇಪಣೆಯನ್ನು ಮಾಡಿದ್ದಾರೆ.

5. ಎದುರುದಾರ 2/ ದೂರುದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಪಿ.ಎನ್. ಹೆಗ್ಡೆಯವರು ಉತ್ತರವಾಗಿ, ಮೊದಲ ಆಪಾದಿತರು 30.05.2008 ಮತ್ತು 30.07.2011 ರ ನಡುವೆ ಕರ್ನಾಟಕ ಸರ್ಕಾರದ ಮಾಜಿ ಮುಖ್ಯಮಂತ್ರಿಯಾಗಿದ್ದರೆಂದು ನಿವೇದಿಸಿದ್ದಾರೆ. ಮೂರನೇ ಆಪಾದಿತರು ಈ ಮೊದಲು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಟಿಕೆಟ್‌ನಿಂದ ಚುನಾಯಿತರಾದ ವಿಧಾನಸಭಾ ಸದಸ್ಯರಾಗಿದ್ದರು. ಇವರು ದಿನಾಂಕ 04.04.2009ರಿಂದ ಜಾರಿಗೆ ಬರುವಂತೆ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು ಮತ್ತು ಭಾರತೀಯ ಜನತಾ ಪಕ್ಷವನ್ನು ಸೇರಿದ್ದರು ಮತ್ತು ದಿನಾಂಕ 18.06.2009 ರಂದು ಮೊದಲ ಆಪಾದಿತರ ನಾಯಕತ್ವದಲ್ಲಿ ಸಚಿವರ ಸಭೆಯಲ್ಲಿ ನೇಮಕ ಮಾಡಲಾಗಿತ್ತು, ಉಪ ಚುನಾವಣೆಯಲ್ಲಿ, ಅವರು ಸೋಲನ್ನನುಭವಿಸಿದ್ದರು, ಹೀಗಾಗಿ 31.08.2009 ರಂದು ಸಚಿವ ಸಭೆಗೆ ರಾಜೀನಾಮೆ ನೀಡಬೇಕಾಯಿತು. ದಿನಾಂಕ 24.06.2010ರಂದು ವಿಧಾನಮಂಡಲದ ಮೇಲ್ಮನೆಗೆ ಚುನಾಯಿತರಾಗಿದ್ದು ಮೊದಲ ಆಪಾದಿತನ ನೇತೃತ್ವದಲ್ಲಿ ಸಚಿವ ಸಂಪುಟಕ್ಕೆ ನೇಮಕಗೊಂಡಿದ್ದರು, ಎರಡನೇ ಆಪಾದಿತರು, ಮೂರನೇ ಆಪಾದಿತರ ಪತ್ನಿಯಾಗಿರುವರು, ಅವಳು ವಿಎಸ್‌ಎಸ್ ಶೈಕ್ಷಣಿಕ ಸಮೂಹ ಸಂಸ್ಥೆಗಳ ಅಧ್ಯಕ್ಷರು ಮತ್ತು ವಿಎಸ್‌ಎಸ್ ಶೈಕ್ಷಣಿಕ ಸಂಸ್ಥೆಯ ಟ್ರಸ್ಟಿಯಾಗಿದ್ದಾಳೆ. ನಾಲ್ಕನೇ ಆಪಾದಿತರು ಸ್ಪಷ್ಟವಾಗಿ 1 ಎಕರೆ 30 ಗುಂಟಾ ಅಳತೆಯ ನಿವೇಶನ ಸಂ. 77ನ್ನು

ಹೊಂದಿರುವ ಆಸ್ತಿ ಮತ್ತು 2 ಎಕರೆ 10 ಗುಂಟೆಗಳ ಆಳತೆಯ ನಿವೇಶನ ಸಂ 78ನ್ನು ಹೊಂದಿರುವ ಮತ್ತೊಂದು ಆಸ್ತಿಯ ಮಾಲೀಕರಾಗಿದ್ದಾರೆ. ಬೆಂಗಳೂರು ಅಭಿವೃದಿ ಪ್ರಾಧಿಕಾರವು ಜ್ಞಾನಭಾರತಿ ಬಡಾವಣೆಯನ್ನು ರೂಪಿಸುವುದಕ್ಕಾಗಿ ದಿನಾಂಕ 02.02.1989 ರಂದು ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಿತ್ತು. ನಾಲ್ಕನೇ ಆಪಾದಿತರ ತಂದೆಗೆ ಸೇರಿದ ಮೇಲಿನ ಸದರಿ ಸ್ವತ್ತುಗಳನ್ನು ಅಧಿಸೂಚಿಸಲಾಗಿತ್ತು. ನಾಲ್ಕನೇ ಅಪಾದಿತ ಮತ್ತು ಅವನ ಸಹೋದರ ಪ್ರಸ್ತಾವಿತ ಆರ್ಜನೆಗಾಗಿ ಪ್ರಾರಂಭಿಕ ಅಧಿಸೂಚನೆಗೆ ಆಕ್ಷೇಪಣೆಗಳನ್ನು ಸಲ್ಲಿಸಿದ್ದರು. ಮೇಲಿನ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕೌಟುಂಬಿಕ ಪಾಲುಗಳಿದ್ದವು ಮತ್ತು ಆ ಸ್ವತ್ತುಗಳು ನಾಲ್ಕನೇ ಆಪಾದಿತನ ಪಾಲಿಗೆ ಬಂದಿದ್ದವು. ಆ ವಿಭಜನೆಯ ವಿವರಣಪತ್ರವನ್ನು 28.10.1993 ರಂದು ನಮೂದಿಸಲಾಗಿತ್ತು. ದಿನಾಂಕ 19.01.1994 ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಮೇಲೆ ಸೂಚಿಸಲಾದ ಸ್ವತ್ತುಗಳ ಜೊತೆಗೆ ನಾಲ್ಕನೇ ಆಪಾದಿತನ ತಂದೆಗೆ ಸೇರಿದ ಕೆಲವು ಸ್ವತ್ತುಗಳನ್ನು ಅಧಿಸೂಚಿಸಲಾಗಿತ್ತು. ಮತ್ತೆ ನಾಲ್ಕನೇ ಆಪಾದಿತ ಮತ್ತು ಅವನ ಸಹೋದರರು ವ್ಯವಹರಣೆಗಳನ್ನು ಕೈಬಿಡಬೇಕೆಂದು ಕೋರಿ ಮೆಮೊವನ್ನು ಆಕ್ಷೇಪಿಸಿದ್ದರು. ಅಂತಿಮ ಅಧಿಸೂಚನೆಯ ಮುಂದುವರಿಕೆಯಾಗಿ, ಭೂಮಿಯನ್ನು 26.08.1997 ರಂದು ಸ್ವಾಧೀನಕ್ಕೆ ತೆಗೆದುಕೊಳ್ಳಲಾಯಿತು ಮತ್ತು 15.09.1197 ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಂಜಿನಿಯರಿಂಗ್ ವಿಭಾಗಕ್ಕೆ ಹಸ್ತಾಂತರಿಸಲಾಯಿತು; ಐತೀರ್ಪನ್ನು ನೀಡಿ ನಷ್ಟ ಪರಿಹಾರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್‌ಡಿ ಲೆಕ್ಕದಲ್ಲಿ ಜಮೆ ಮಾಡಲಾಯಿತು. ಭೂ ಆರ್ಜನಾ ಅಧಿನಿಯಮದ 16(2)ನೇ ಪ್ರಕರಣದ ಮೇರೆಗಿನ ಅಧಿಸೂಚನೆಯನ್ನು ದಿನಾಂಕ 25.06.1998 ರಂದು ಸಹ ಹೊರಡಿಸಲಾಯಿತು. ನಾಲ್ಕನೇ ಆಪಾದಿತನು ಈ ಮೇಲಿನ ಸಂಗತಿಗಳನ್ನು ಚೆನ್ನಾಗಿ ಅರಿತಿದ್ದರು. ಕರ್ನಾಟಕ ಭೂ (ವರ್ಗಾವಣೆ ನಿರ್ಬಂಧ) ಅಧಿನಿಯಮದ, 1991ರ 3 ಮತ್ತು 4ನೇ ಪ್ರಕರಣಗಳು, ಅಧಿಸೂಚಿತ ಭೂಮಿಗಳನ್ನು ವಿಲೇ ಮಾಡುವುದನ್ನು ಭೂ ಮಾಲೀಕರಿಗೆ ನಿರ್ಬಂಧಿಸಿವೆ, ಅವನು ಇನ್ನೂ ದಿನಾಂಕ 04.09.2004 ರಂದು ಕ್ರಯಪತ್ರವನ್ನು ಮಾಡುತ್ತಿದ್ದರೂ ಸ್ವಾಧೀನತೆಯನ್ನು ಹಸ್ತಾಂತರಿಸಿದ್ದನು. ಅದೇ ದಿನದಂದು, ಖಾಲಿ ನಿವೇಶನ ಸಂ 47, 48 ಮತ್ತು 49 ನ್ನು ನಿವೇಶನ

ಸಂ 77 ಮತ್ತು 78 ಎಂದು ರೂಪಿಸಿ ಪರಿಗಣನೆಗಾಗಿ ಪ್ರತ್ಯೇಕ ನೋಂದಾಯಿತ ಕ್ರಯಪತ್ರದ ಮೂಲಕ ಎರಡನೇ ಆಪಾದಿತನಿಗೆ ಮಾರಾಟ ಮಾಡಲಾಯಿತು. ಪರಭಾರೆಯನ್ನು ಮಾಡಿದ ನಂತರ, ನಾಲ್ಕನೇ ಆಪಾದಿತನು ನಗರಾಭಿವೃದ್ದಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಯಾವುದೇ ಮನವಿಯನ್ನು ಮಾಡುವ ಹಕ್ಕನ್ನು ಹೊಂದಿರಲಿಲ್ಲ, ಮೊದಲನೇ ಆಪಾದಿತನು ಪದಧಾರಣೆ ಮಾಡುವವರೆಗೂ, ಜಮೀನನ್ನು ಅಧಿಸೂಚನೆಯಿಂದ ತೆಗೆದು ಹಾಕಿರಲಿಲ್ಲ, ಆದಾಗ್ಯೂ, ಮೊದಲನೇ ಆಪಾದಿತನು ರಾಜ್ಯದ ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಿದ ನಂತರ ನಾಲ್ಕನೇ ಆಪಾದಿತನು ಎರಡನೇ ಆಪಾದಿತನಿಗೆ ಮಾರಾಟ ಮಾಡಿದ್ದ ನಿವೇಶನ ಸಂ. 77 ಮತ್ತು 78 ರಲ್ಲಿರುವ 22 ಗುಂಟಾ ಜಮೀನನ್ನು ಕೈಬಿಡಬೇಕೆಂದು ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ 06.06.2009 ರಂದು ಮತ್ತೊಂದು ಮನವಿಯನ್ನು ನೀಡಿದನು. ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು 20.06.2009 ರ ತಮ್ಮ ಟಿಪ್ಪಣಿಯಲ್ಲಿ ಸ್ವತ್ತನ್ನು ಈಗಾಗಲೇ ಬೆಂಗಳೂರು ಅಭಿವೃದ್ದಿ ಪ್ರಾಧಿಕಾರದೊಂದಿಗೆ ನಿಹಿತಗೊಳಿಸಿರುವುದರಿಂದ ಕೋರಲಾದ ಮನವಿಯನ್ನು ಕಾನೂನಿನ ಪ್ರಕಾರ ಪರಿಗಣಿಸಲು ಸಾಧ್ಯವಿಲ್ಲವೆಂದು ಮತ್ತು ಆರ್ಜನೆಯ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆಯೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಆದರೆ ಮೊದಲ ಆಪಾದಿತನು ಹಿರಿಯ ಅಧಿಕಾರಿಗಳ ಅಭಿಪ್ರಾಯವನ್ನು ಕಡೆಗಣಿಸಿ, ಪ್ರಧಾನ ಕಾರ್ಯದರ್ಶಿಯ ನಿರ್ಣಯವನ್ನು ತಿರಸ್ಕರಿಸಿ, ನಾಲ್ಕನೇ ಆಪಾದಿತನ ಹೆಸರಿನಲ್ಲಿ 22 ಗುಂಟೆಗಳ ನಿವೇಶನ ಸಂಖ್ಯೆ 77 ಮತ್ತು 78ರ ಜಮೀನನ್ನು ಅಧಿಸೂಚನೆಯಿಂದ ತೆಗೆದುಹಾಕಲು ಆದೇಶಿಸಿದ್ದಾರೆ. ಎರಡನೇ ಆಪಾದಿತನು ಪ್ರಶ್ನಿತ ಜಮೀನನ್ನು ಖರೀದಿಸುವಾಗ ಕಟ್ಟಡಗಳು ಅದರಲ್ಲಿ ಅಸ್ತಿತ್ವದಲ್ಲಿರಲಿಲ್ಲ. 2009–10 ನೇ ಸಾಲಿನ ವರ್ಷದ ಆಸ್ತಿ ಮತ್ತು ಹೊಣೆಗಾರಿಕೆಗಳಲ್ಲಿ. ಮೂರನೇ ಆಪಾದಿತನು, ಅಂದಿನ ಹಾಲಿ ವಿಧಾನ ಪರಿಷತ್‌ನ ಸದಸ್ಯನಾಗಿದ್ದುದರಿಂದ, ಅವನು 28.35.314/– ರೂ ಮೌಲ್ಯದ 21178 ಚದರ ಅಡಿ ಅಳತೆಯ ನಿವೇಶನದ ಸಂ 78 ರಲ್ಲಿನ ಸಂ 47, 48 ಮತ್ತು 49 ನೇ ನಿವೇಶನಗಳನ್ನು ಗೇಣಿಗೆ ನೀಡಲಾಗಿದೆಯೆಂದು ಮತ್ತು 2490 ಅಳತೆಯ ಖಾಲಿ ಪ್ಲಾಟ್ ಸಂ 50 ಅದರ ಸರ್ವೆ ಸಂಖ್ಯೆಯಲ್ಲಿ ಎರಡನೇ ಆಪಾದಿತನ

ಹೆಸರಿನಲ್ಲಿದೆಯೆಂದು ಘೋಷಿಸಿದ್ದರು. ಜಮೀನಿನಲ್ಲಿರುವ ಇತರ ಯಾವುದೇ ಕಟ್ಟಡವನ್ನು ಸೂಚಿಸಿರಲಿಲ್ಲ, ಆದರೆ ನಾಲ್ಕನೇ ಆಪಾದಿತನು ತನ್ನ ಆರ್ಜಿಯಲ್ಲಿ, ಸದರಿ ಸ್ವತ್ತುಗಳಲ್ಲಿ ಕಟ್ಟಡಗಳಿದ್ದವೆಂದು ಮತ್ತು 1ನೇ ಆಪಾದಿತನು ಜಮೀನುಗಳನ್ನು ಅಧಿಸೂಚನೆಯಿಂದ ತೆಗೆದುಹಾಕುವ ಆದೇಶವನ್ನು ಹೊರಡಿಸುವ ಸಮಯದಲ್ಲಿ ಅದು ತನ್ನ ಸ್ವಾಧೀನದಲ್ಲಿತ್ತೆಂದು ತಿಳಿಸಿದ್ದಾನೆ. ಎರಡನೇ ಆಪಾದಿತಳು 2007–2008 ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆಗೆ ನಿವೇಶನ ಸಂ. 77 ಮತ್ತು 78 ರಲ್ಲಿರುವ ಸ್ವತ್ತುಗಳಿಗೆ ಸಂಬಂಧಿಸಿದ ಸ್ವತ್ತಿಗೆ ತೆರಿಗೆಯ ಸ್ವ–ನಿರ್ಧಾರವನ್ನು ಸಲ್ಲಿಸಿದ್ದಳೆಂಬ ನಿವೇದನೆಯುನ್ನು ಮಾನ್ಯ ವಕೀಲರು ಮುಂದುವರೆಸಿದ್ದಾರೆ. ಅವಳ 2008 – 2009ನೇ ವರ್ಷದ ಸ್ವತ್ತಿನ ತೆರಿಗೆಯ ಸ್ವ–ನಿರ್ಧರಣೆಯಲ್ಲಿ ಮೊದಲ ಬಾರಿಗೆ ಅವಳು, ತಾನು ಖರೀದಿಸಿದ ಜಮೀನುಗಳಲ್ಲಿ ಒಟ್ಟು 26.620 ಚದರ ಅಡಿಗಳೆಂಬ ಐದು ಮಹಡಿಗಳನ್ನೊಳಗೊಂಡ ಕಟ್ಟಡದ ಪ್ರದೇಶವನ್ನು ನಿರ್ಮಿಸಲಾಗಿದೆಯೆಂದು ಮತ್ತು ಸದರಿ ಜಮೀನನ್ನು 2004ನೇ ವರ್ಷದಲ್ಲಿ ನಿರ್ಮಿಸಲಾಗಿತ್ತೆಂದು ಘೋಷಿಸಿದ್ದಾಳೆ. ಅದು ಖಾಲಿ ಜಮೀನನ್ನು ಮೂರನೇ ಪಕ್ಷಕಾರರಿಗೆ ಗುತ್ತಿಗೆ ನೀಡಲಾಗಿತ್ತೆನ್ನುವ ಸಂಗತಿಯನ್ನು ಸಾದರಪಡಿಸುತ್ತದೆ. ಕಟ್ಟಡದ ನಿರ್ಮಾಣಕ್ಕೆ ಕಟ್ಟಡ ಯೋಜನೆಯುನ್ನು ಪ್ರಾಧಿಕಾರಗಳಿಂದ ಪಡೆದುಕೊಂಡಿರುವುದಿಲ್ಲ ಮತ್ತು ಈಗಾಗಲೇ ಜಮೀನು ಬಡಾವಣೆ ನಿರ್ಮಾಣಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ವಾಧೀನದಲ್ಲಿತ್ತು. ಹೀಗಾಗಿ ಎರಡನೇ ಮತ್ತು ಮೂರನೇ ಆಪಾದಿತರು ವಿನಿಯಮಗಳನ್ನು ಉಲ್ಲಂಘಿಸಿರುವರು ಮತ್ತು ರಾಜಕೀಯ ಶಕ್ತಿಯನ್ನು ಉಪಯೋಗಿಸಿ ಕಾನೂನು ಬಾಹಿರವಾಗಿ ಕಟ್ಟಡ ನಿರ್ಮಿಸಿದ್ದಾರೆ, ಎರಡನೇ ಮತ್ತು ನಾಲ್ಕನೇ ಆಪಾದಿತರು ತಮ್ಮ ರಾಜಕೀಯ ಪ್ರಭಾವವನ್ನು ಬಳಸಿ ಮೊದಲ ಆಪಾದಿತನ ಮೂಲಕ ಜಮೀನನ್ನು ಅಧಿಸೂಚನೆಯಿಂದ ತೆಗೆದುಹಾಕಿದ್ದಾರೆ. ಮೊದಲನೇ ಆಪಾದಿತನು ತನ್ನ ಬೆಂಬಲಿಗರು/ ಎರಡನೇ ಆಪಾದಿತರಿಗೆ ಕಾನೂನು ಬಾಹಿರ ಅನುಕೂಲ ಮಾಡಿಕೊಡುವ ಸಲುವಾಗಿ ಸಹ–ಆಪಾದಿತರೊಂದಿಗೆ ಸಂಚು ನಡೆಸಿ ಅಸ್ತಿತ್ವದಲ್ಲಿರುವ ಎಲ್ಲಾ ನಿಯಮಗಳು ಮತ್ತು ವಿನಿಯಮಗಳನ್ನು ಗಾಳಿಗೆ ತೂರಿದ್ದಾರೆ. ತನಿಖಾಧಿಕಾರಿಯು, ತನಿಖೆಯನ್ನು ನಡೆಸಿದ ನಂತರ ಈ ಮುಂದಿನ ಆಪಾದನೆಗಳ ಕುರಿತು ಅಂತಿಮ ವರದಿಯನ್ನು ಸಲ್ಲಿಸಿದರು.

ಎ) ನಾಲ್ಕನೇ ಆಪಾದಿತನು ಸದರಿ ಜಮೀನಿನ ಆರ್ಜನೆಯನ್ನು ಬಹಿರಂಗಪಡಿಸದೆ ಬಡಾವಣೆ ನಿರ್ಮಿಸುವುದಕ್ಕಾಗಿ ಎರಡನೇ ಆಪಾದಿತನ ಹೆಸರಿಗೆ ಮಾರಾಟ ಮಾಡಿದ್ದಾನೆ.

ಬಿ) ಎರಡನೇ ಆಪಾದಿತನು ಆರ್ಜನೆಯ ವ್ಯವಹರಣೆಗಳನ್ನು ತಿಳಿಯದೆ ಜಮೀನನ್ನು ಖರೀದಿಸಿದ್ದಾನೆ.

ಸಿ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಜಮೀನಿನ ವಾಸ್ತವಿಕ ಸ್ವಾಧೀನತೆಯನ್ನು ತೆಗೆದುಕೊಳ್ಳದಿದ್ದುದರಿಂದ ಸ್ವಾಧೀನತೆಯು 4ನೇ ಆಪಾದಿತನಲ್ಲೇ ಉಳಿದಿತ್ತು.

ಡಿ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976ರ 27ನೇ ಪ್ರಕರಣದ ಪ್ರಕಾರ, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಐದು ವರ್ಷಗಳ ಅವಧಿಯೊಳಗೆ ಪ್ರಾಧಿಕಾರವು ಗಣನೀಯವಾಗಿ ಯೋಜನೆಯನ್ನು ಜಾರಿಗೊಳಿಸಲು ವಿಫಲಗೊಂಡರೆ ಯೋಜನೆಯು ರದ್ದಾಗುತ್ತಿತ್ತು.

ಇ) ಭೂ ಆರ್ಜನಾ ಅಧಿನಿಯಮ 16(2)ನೇ ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯು, ವಾಸ್ತವಿಕ ಸ್ವಾಧೀನತೆಯನ್ನು ತಗೆದುಕೊಂಡ ಹೊರತು ಅದು ಸಾಕಷ್ಟಿರಲಿಲ್ಲ. ಸರ್ವೇ ಸಂಖ್ಯೆಯಲ್ಲಿ ಉಳಿದ ಜಮೀನನ್ನು ಎರಡು ಸಂದರ್ಭಗಳಲ್ಲಿ ಗೃಹ ನಿರ್ಮಾಣ ಸಹಕಾರಿ ಸಂಘದ ಪರವಾಗಿ ಅಧಿಸೂಚನೆಯಿಂದ ತೆಗೆದುಹಾಕಲಾಯಿತು.

ಎಫ್) ಮಾಜಿ ಮುಖ್ಯಮಂತ್ರಿಗಳು ಅಧಿಸೂಚನೆಯಿಂದ ತೆಗೆದುಹಾಕಲು/ ಅಗತ್ಯ ಕ್ರಮಕೈಗೊಳ್ಳಲು ಆದೇಶಿಸಿದ್ದರು ಮತ್ತು ಎರಡನೇ

ಆಪಾದಿತನು ಜಮೀನನ್ನು ಖರೀದಿಸಿ ನಂತರ ಸಂಸ್ಥೆಗಳನ್ನು ಪ್ರಾರಂಭಿಸಿದ್ದಾರೆ.

ಜಿ) ಅಧಿಸೂಚನೆಯಿಂದ ತೆಗೆದುಹಾಕುವ ಪ್ರಕ್ರಿಯೆಯಲ್ಲಿ ಮೂರನೇ ಆಪಾದಿತನ ಪಾತ್ರವಿಲ್ಲ.

ಎಚ್) ವಿಶೇಷ ಅಭಿಯೋಜಕರು ಬಿ ವರದಿಯನ್ನು ಸಲ್ಲಿಸಲು ಇದು ಸೂಕ್ತ ಸನ್ನಿವೇಶವೆಂಬ ತನ್ನ ಅಭಿಪ್ರಾಯವನ್ನು ನೀಡಿದ್ದಾರೆ.

ಅದರೆ, ತನಿಖಾಧಿಕಾರಿಯು ನೀಡಿದ ಮೇಲಿನ ಕಾರಣಗಳು ಸಮರ್ಥನೀಯವಲ್ಲ. ನಾಲ್ಕನೇ ಆಪಾದಿತನು ಜಮೀನನ್ನು ಮಾರಾಟ ಮಾಡಿದ್ದರೂ ಕೂಡ ಸ್ವತ್ತು ತನ್ನ ಸ್ವಾಧೀನದಲ್ಲಿದೆಯೆಂದು ನಿರ್ವಹಿಸುವುದನ್ನು ಮುಂದುವರೆಸಿದ್ದಾನೆ. ಸಣ್ಣ ತುಂಡು ಭೂಮಿಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ 27ನೇ ಪ್ರಕರಣದ ಮೇರೆಗೆ ಯೋಜನೆಯನ್ನು ಜಾರಿಗೊಳಿಸದಿರುವುದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ 27ನೇ ಪ್ರಕರಣದ ಪರಿಭಾಷೆಯೊಳಗೆ ಬರುವುದಿಲ್ಲ. ಸ್ವಾಧೀನತೆಗೆ ತಗೆದುಕೊಳ್ಳುವ ರೀತಿ ಸರಿಯಾಗಿದೆ ಅಥವಾ ದೋಷಯುಕ್ತವಾಗಿದೆಯೆಂದು ಅಭಿಪ್ರಾಯಪಡುವುದು ತನಿಖಾಧಿಕಾರಿಯ ಅರ್ಥವ್ಯಾಪ್ತಿಯೊಳಗೆ ಬರುವುದಿಲ್ಲ. ಅಂತಿಮ ಅಧಿಸೂಚನೆಯನ್ನು ಹೊರಡಿಸಿದ ನಂತರ ಸ್ವಾಧೀನತೆಗೆ ತೆಗೆದುಕೊಂಡು ಐತೀರ್ಪನ್ನು ಹೊರಡಿಸಲಾಗಿತ್ತು ಮತ್ತು 16 (2)ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಸಹ ಹೊರಡಿಸಲಾಗಿತ್ತು, ನಿವೇಶನಗಳನ್ನು ನಿರ್ಮಿಸುವ ಸಲುವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಇಂಜಿನಿಯರಿಂಗ್ ವಿಭಾಗಕ್ಕೆ ಜಮೀನನ್ನು ಹಸ್ತಾಂತರಿಸಲಾಗಿತ್ತು, ಅದರೆ ವ್ಯಾಜ್ಯ ಇತ್ಯರ್ಥದಲ್ಲಿದ್ದ ಕಾರಣದಿಂದ ಅಧಿಕಾರಿಗಳು ನಿವೇಶನಗಳನ್ನು ನಿರ್ಮಿಸಲು ಸಾಧ್ಯವಾಗಿರಲಿಲ್ಲ. ಅದರ ಪಕ್ಕದಲ್ಲಿದ್ದ ಜಮೀನನ್ನು ಅಧಿಸೂಚನೆಯಿಂದ ತೆಗೆದು ಹಾಕುವುದು ಪ್ರಶ್ನಿತ ಜಮೀನನ್ನು ಅಧಿಸೂಚನೆಯಿಂದ ತೆಗೆದುಹಾಕುವುದಕ್ಕೆ

ಆಧಾರವಾಗುವುದಿಲ್ಲ. ಈ ಸನ್ನಿವೇಶಗಳ ಅಡಿಯಲ್ಲಿ, ಆ ಜಮೀನುಗಳನ್ನು ಅಧಿಸೂಚನೆಯಿಂದ ತೆಗೆದುಹಾಕುವುದು ಪ್ರಸ್ತುತ ಪ್ರಕರಣಕ್ಕಿಂತ ಒಟ್ಟಾರೆ ಭಿನ್ನವಾಗಿದೆ. ಮಾಜಿ ಮುಖ್ಯಮಂತ್ರಿ ಒಮ್ಮೆ ಜಮೀನನ್ನು ಅಧಿಸೂಚನೆಯಿಂದ ತೆಗೆದುಹಾಕಿದರೆ ವ್ಯವಹಾರ ಕಲಾಪಗಳ ನಿಂಬಂಧನೆಗಳಂತೆ ಸಂಬಂಧಪಟ್ಟ ಇಲಾಖೆಯ ಅಧೀನ ಕಾರ್ಯದರ್ಶಿಯು ರಾಜ್ಯದ ರಾಜ್ಯಪಾಲರ ಹೆಸರಿನಲ್ಲಿ ಅಧಿಕೃತಗೊಳಿಸಿ ಸರ್ಕಾರದ ಆದೇಶವನ್ನು ಹೊರಡಿಸಿ ಪ್ರಕಟಿಸಬೇಕಾಗುತ್ತದೆ. ಅದರೆ, ಪ್ರಶ್ನಿತ ಅಧಿಸೂಚನೆಯಿಂದ ತಗೆದುಹಾಕುವುದನ್ನು ಸಾಂಪ್ರದಾಯಿಕ ಆದೇಶಗಳಂತೆ ಮುಕ್ತಾಯಗೊಳಿಸಿಲ್ಲ. ಜಮೀನನ್ನು ಅಧಿಸೂಚನೆಯಿಂದ ತೆಗೆದುಹಾಕುವಲ್ಲಿ ಮಾಜಿ ಮುಖ್ಯಮಂತ್ರಿಯವರು ಮಾಡಿದ ಪ್ರಯತ್ನ, ನಿಯಮವನ್ನು ತೇಲಿಸಲು ನಂತರದ ಮುಖ್ಯಮಂತ್ರಿಗಳಿಗೆ ಯಾವುದೇ ಆಧಾರ ಇರಲಿಲ್ಲ. 2009 ನೇ ವರ್ಷದಲ್ಲಿ ಮಾಡಿದ ಆಪಾದಿತನ ಕಡೆಯ ಮನವಿಯಲ್ಲಿ ಮೊದಲ ಬಾರಿಗೆ ಅವನು ಸೋಮಣ್ಣನ ಹೆಂಡತಿ ಶೈಲಜಾ ಎನ್ನುವ ಖರೀದಿದಾರನ ಹೆಸರನ್ನು ಪ್ರಕಟಿಸಿದ್ದಾನೆ. ಸ್ವತ್ತನ್ನು ಅಧಿಸೂಚನೆಯಿಂದ ತೆಗೆದುಹಾಕಿಸುವಲ್ಲಿ ಮೂರನೇ ಆಪಾದಿತನ ಪಾತ್ರ ಇರಲಿಲ್ಲವೆಂದು ತನಿಖಾಧಿಕಾರಿ ಅಭಿಪ್ರಾಯಪಡುವುದಕ್ಕೆ ಅವಕಾಶವಿರುವುದಿಲ್ಲ, ತನಿಖಾಧಿಕಾರಿಯು ಪ್ರಶ್ನಾವಳಿಗಳನ್ನು ರೂಪಿಸುವ ರೀತಿಯು, ತನಿಖೆಯ ಪ್ರಾರಂಭದಿಂದಲೇ 'ಬಿ' ನ ನಮೂನೆಯಲ್ಲಿ ಅಂತಿಮ ವರದಿಯನ್ನು ಸಲ್ಲಿಸಲು ಅವನು ಮನಸ್ಸನ್ನು ಸಿದ್ಧಗೊಳಿಸಿದ್ದನೆಂಬುದನ್ನು ಬಹಿರಂಗಪಡಿಸುತ್ತದೆ. ಸರ್ಕಾರಿ ಅಭಿಯೋಜಕರು ಸೇರಿರುವ ಅಥವಾ ಪಡೆದುಕೊಂಡ ಅಭಿಪ್ರಾಯವನ್ನು ಸಂಹಿತೆಯ ಮೇರೆಗಾಗಲಿ ಅಥವಾ ಪೋಲಿಸು ಸಂಹಿತೆಯ ಮೇರೆಗಾಗಲಿ ಒದಗಿಸಿರುವುದಿಲ್ಲ. ತನಿಖಾಧಿಕಾರಿಯು ಅಂತಿಮ ನಿರ್ಣಯಕ್ಕೆ ಬರಲು ಸರ್ಕಾರಿ ಆಭಿಯೋಜಕರಿಂದ ಅಭಿಪ್ರಾಯವನ್ನು ಸರಿಯಾಗಿ ಕೋರಿರುವುದಿಲ್ಲ. ತನಿಖಾಧಿಕಾರಿಯು ಆಪಾದಿತನು ಅಪರಾಧವೆಸಗಿದ ಅಪರಾಧಿಯೆಂದು ಅಭಿಪ್ರಾಯಪಡಲು ಸಂಗ್ರಹಿಸಿದ ಮಾಹಿತಿಯು ಸಾಕಷ್ಟಿರುವುದಿಲ್ಲ ಮತ್ತು ವಿಶೇಷ ನ್ಯಾಯಾಧೀಶರು 'ಬಿ' ಅಂತಿಮ ವರದಿಯನ್ನು ಸರಿಯಾಗಿಯೇ ತಳ್ಳಿಹಾಕಿದ್ದಾರೆ ಮತ್ತು ಅಪರಾಧಗಳ ಸಂಜ್ಞೇಯತೆಯನ್ನು ತೆಗೆದುಕೊಂಡಿದ್ದಾರೆ ಮತ್ತು ಪುನರ್‌ಪರಿಶೀಲನಾ ಅರ್ಜಿಗಳನ್ನು ವಜಾಗೊಳಿಸಲು ತಕ್ಕುದಾಗಿರುತ್ತವೆ.

6. ಮೇಲಿನ ಪ್ರತಿವಾದಿ ನಿವೇದನೆಗಳ ಹಿನ್ನಲೆಯಲ್ಲಿ ಅಧೀನ ನ್ಯಾಯಾಲಯದ ದಾಖಲೆಗಳನ್ನು ಅವಗಾಹಿಸಿದ ನಂತರ ನನ್ನ ಪರಿಗಣನೆಗೆ ಈ ಮುಂದಿನ ಅಂಶಗಳು ಉದ್ಭವಿಸುತ್ತವೆ:

> *''ಆಪಾದಿಸಲಾದ ಅಪರಾಧಗಳನ್ನು ಸಂಜ್ಞಾನಕ್ಕೆ ತೆಗೆದು ಕೊಳ್ಳುವಲ್ಲಿ ಮತ್ತು ಅರ್ಜಿದಾರನಿಗೆ ಸಮನುಗಳನ್ನು ಹೊರಡಿಸುವಲ್ಲಿ ವಿಶೇಷ ನ್ಯಾಯಾಧೀಶರ ಆದೇಶವು ಕಾನೂನುಬಾಹಿರವಾಗಿದೆಯೇ?*

7. ಅಧಿನಿಯಮದ (3) (ಸಿ) ಉಪ–ಪ್ರಕರಣದ 19ನೇ ಪ್ರಕರಣದ ಮೇರೆಗೆ ಉದ್ದೇಶಿಸಲಾದ ಸಮರ್ಥನೆಯ ಸಂಬಂಧ ಒಂದೇ ಏಟಿಗೆ ಈ ಪುನರ್ ಪರಿಶೀಲನಾ ಅರ್ಜಿಗಳಿಗೆ, ಮೇಲಿನಂತೆ ದೂಷಣೆಯನ್ನು ಮಾಡಿದ್ದು ಅದನ್ನು ಹೀಗೆ ಓದಲಾಗಿದೆ:

> ***''19 ನೇ ಪ್ರಾಸಿಕ್ಯೂಷನ್ ಸಂಬಂಧಿಸಿದಂತೆ ಅಗತ್ಯ ಪೂರ್ವಾನುಮೋದನೆ.*** *– (1)......*
>
> *(2). . . . . . . .*
>
> *(3) ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2) ರಲ್ಲಿ ಒಳಗೊಂಡಿರುವುದು ಏನೇ ಇದ್ದರೂ,*
>
> *(ಎ) .. . . . .*
>
> *(ಬಿ) . . . . .*
>
> *(ಸಿ) ನ್ಯಾಯಾಲಯವು ಯಾವುದೇ ಇತರ ಆಧಾರದ ಮೇಲೆ ಈ ಅಧಿನಿಯಮದ ಮೇರೆಗೆ ವ್ಯವಹರಣೆಗಳನ್ನು ತಡೆಯತಕ್ಕದಲ್ಲ ಮತ್ತು ನ್ಯಾಯಾಲಯವು, ಯಾವುದೇ ವಿಚಾರಣೆ, ಅಧಿ ವಿಚಾರಣೆ, ಅಪೀಲು ಅಥವಾ ಇತರ ವ್ಯವಹರಣೆಗಳಲ್ಲಿ ಹೊರಡಿಸಿದ ಯಾವುದೇ ವಾದಕಾಲೀನ ಆದೇಶಕ್ಕೆ ಸಂಬಂಧಿಸಿದಂತೆ ಪರಿಷ್ಕರಣೆಯ ಅಧಿಕಾರವನ್ನು ಚಲಾಯಿಸತಕ್ಕದಲ್ಲ.*

8. ಅಧಿನಿಯಮದ 3ನೇ ಪ್ರಕರಣದ ಮೇರೆಗೆ ಅಧಿಕಾರವನ್ನು ಚಲಾಯಿಸಿ ಸರ್ಕಾರವು ವಿಶೇಷ ನ್ಯಾಯಾಧೀಶರನ್ನು ನೇಮಕ ಮಾಡಿದ್ದು, ವಿಶೇಷ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಯನ್ನು ಅಧಿನಿಯಮದ 4ನೇ ಪ್ರಕರಣದ ಮೂಲಕ ನಿಯಂತ್ರಿಸಲಾಗಿದೆ. ವಿಶೇಷ ನ್ಯಾಯಾಧೀಶರ ಸ್ಥಾನಮಾನವು ***ಎ.ಆರ್ ಅಂತುಲೆ –ವಿರುದ್ಧ– ರಾಮ್‌ದಾಸ್ ಶ್ರೀನಿವಾಸ್ ನಾಯರ್ ಮತ್ತು ಮತ್ತೊಬ್ಬರು*** [6], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ಇತ್ಯರ್ಥಪಡಿಸಲಾದಂತೆ ಮ್ಯಾಜಿಸ್ಟ್ರೇಟರಷ್ಟಿರುತ್ತದೆ.

9. ***ರಾಜೇಂದ್ರ ಕುಮಾರ್ ಸೀತಾರಾಮ್ ಪಾಂಡೆ ಇತರರು – ವಿರುದ್ಧ – ಉತ್ತಮ್ ಮತ್ತು ಮತ್ತೊಬ್ಬರು*** [7] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಹೀಗೆ ಅಭಿಪ್ರಾಯ ಪಟ್ಟಿದೆ:

> *“ . . . . . . . ಪ್ರಕ್ರಿಯೆಯನ್ನು ಪ್ರಾರಂಭಿಸಬೇಕೆಂದು ಸೂಚಿಸುವ ಆದೇಶವು ಸಂಪೂರ್ಣವಾಗಿ ವಾದಕಾಲೀನವಾಗಿರುತ್ತದೆ, ಆದುದರಿಂದ 39 ನೇ ಪ್ರಕರಣದ (2) ನೇ ಉಪ–ಪ್ರಕರಣದ ಮೇರೆಗಿನ ನಿಷೇಧವು ಅನ್ವಯವಾಗುವುದಿಲ್ಲವೆಂದು, ಮತ್ತೊಂದು ಕಡೆ, ಮಧ್ಯವರ್ತಿಯಾಗಿರಬೇಕು ಅಥವಾ ಅಂತಿಮ ಸ್ವರೂಪದ್ದಾಗಿರಬೇಕು, ಆದುದರಿಂದ 397ನೇ ಪ್ರಕರಣದ ಮೇರೆಗಿನ ಪುನರ್‌ಪರಿಶೀಲನಾ ಅಧಿಕಾರವ್ಯಾಪ್ತಿಯನ್ನು ಇದಕ್ಕೆ ವಿರುದ್ಧವಾಗಿ ಚಲಾಯಿಸಬಹುದಾಗಿದೆ ಎಂದು ಅಭಿಪ್ರಾಯಪಡಲಾಗಿದೆ.. . .”*

10. ಇನ್ನು, ಮತ್ತೊಂದು ತೀರ್ಪಿನಲ್ಲಿ ***ಊರ್ಮಿಳಾ ದೇವಿ –ವಿರುದ್ಧ– ಯುಧವೀರ್ ಸಿಂಗ್*** [8], ಪ್ರಕರಣದಲ್ಲಿ ಮೊದಲಿನ ವಿವಾದವನ್ನು ಒಳಗೊಂಡಿರುವ ತೀರ್ಪುಗಳನ್ನು ಸಮೀಕ್ಷಿಸಿದ ಮೇಲೆ ಸಂಹಿತೆಯ 397 ನೇ ಪ್ರಕರಣದ ಮೇರೆಗೆ ಪುನರ್ ಪರಿಶೀಲನಾ ಅಧಿಕಾರವ್ಯಾಪ್ತಿಯು, ಸಮನುಗಳನ್ನು ಹೊರಡಿಸಲು ಸೂಚಿಸುವ

6. ಎಐಆರ್ 1984 ಎಸ್‌ಸಿ 718
7. ಎಐಅರ್ 1999 ಎಸ್‌ಸಿ 1027
8. (2013) 15 ಎಸ್ ಸಿ 624

ಮ್ಯಾಜಿಸ್ಟ್ರೇಟರ್ ಆದೇಶವನ್ನು ಪರಿಣಾಮಕಾರಿಗೊಳಿಸುವುದಕ್ಕೆ ಕಾನೂನಿನ ಸ್ಥಾನಮಾನವನ್ನು ದೃಢಪಡಿಸಲಾಗಿತ್ತು.

11. ಅಧಿನಿಯಮದ 27ನೇ ಪ್ರಕರಣದ ಕಾರಣದಿಂದಾಗಿ, ಉಚ್ಚ ನ್ಯಾಯಾಲಯವು, ತನ್ನ ಸ್ಥಳೀಯ ವ್ಯಾಪ್ತಿಯೊಳಗೆ ಸೆಷನ್ಸ್ ನ್ಯಾಯಾಲಯವು ಪ್ರಕರಣಗಳನ್ನು ಅಧಿವಿಚಾರಣೆ ನಡೆಸಿದರೆ ಹೇಗೋ ಹಾಗೇ ವಿಶೇಷ ನ್ಯಾಯಾಲಯದಲ್ಲಿ ಉಚ್ಚ ನ್ಯಾಯಾಲಯವು ಅಪೀಲಿನ ಮತ್ತು ಪುನರ್ ಪರಿಶೀಲನಾ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತದೆ. ಅದು ಹೀಗಿರುವಾಗ ಮೇಲೆ ಉದ್ಧರಿಸಲಾದ ಕಾನೂನು ಸ್ಥಾನದ ಬೆಳಕಿನಲ್ಲಿ, ಅಧಿನಿಯಮದ ಮೇರೆಗಿನ ವಿಚಾರಣೆ, ಅಧಿವಿಚಾರಣೆ, ಅಪೀಲು ಅಥವಾ ವ್ಯವಹರಣೆಗಳಲ್ಲಿನ ವಾದಕಾಲೀನ ಆದೇಶಕ್ಕೆ ಸಂಬಂಧಿಸಿದ ಅಧಿನಿಯಮ, 19ನೇ ಪ್ರಕರಣದ (3)ನೇ ಉಪ–ಪ್ರಕರಣವು ಉದ್ದೇಶಿಸಿದ ನಿಷೇಧವು, ನಿಶ್ಚಿತವಾಗಿ, ಆಪಾದಿತ ವ್ಯಕ್ತಿಗಳ ವಿರುದ್ಧ ವಿಶೇಷ ನ್ಯಾಯಾಧೀಶರು ಆದೇಶಿಸಿದ ಪ್ರಕ್ರಿಯೆಯನ್ನು ಪ್ರಶ್ನಿಸುವುದಕ್ಕೆ ಅನ್ವಯಿಸುವುದಿಲ್ಲ. ಆದುದರಿಂದ ಪ್ರಸ್ತುತ ಅರ್ಜಿಯ ಸಮರ್ಥನೆಯನ್ನು ಒಪ್ಪುವುದಕ್ಕೆ ಯಾವುದೇ ಆಸ್ಪದವಿರುವುದಿಲ್ಲ.

12. ಈಗ ಪುನರ್ ಪರಿಶೀಲನಾ ಅರ್ಜಿದಾರರ ಪ್ರಕರಣಕ್ಕೆ ಹಿಂದಿರುಗಿ, ಅವರು ರಾಜ್ಯ ಸರ್ಕಾರದಿಂದ ಪೂರ್ವಾನುಮೋದನೆ ಪಡೆಯದೆ ಸಂಜ್ಞೇಯತೆಯನ್ನು ಪಡೆದುಕೊಂಡ ನಂತರ ಎರಡನೆಯದಾಗಿ ಸಂಹಿತೆಯ 200ನೇ ಪ್ರಕರಣವು ನಮೂದಿಸಲಾದಂತೆ ವಿಚಾರಣೆ ನಡೆಸದೆ ನೇರವಾಗಿ ಪ್ರಕ್ರಿಯೆಯನ್ನು ಜಾರಿಗೊಳಿಸುವ ಮತ್ತು ಮೂರನೆಯದಾಗಿ, ವಿವೇಚನೆಯನ್ನು ಮಾಡದೆ ಆದೇಶವನ್ನು ಮಾಡಲಾಗಿದೆ ಎನ್ನುವ ಆಧಾರದ ಮೇಲೆ ಮೂಲತಃವಾಗಿ ವಿಶೇಷ ನ್ಯಾಯಾಧೀಶರ ಆದೇಶವನ್ನು ಪಟ್ಟು ಹಿಡಿದು ವಾದಿಸಿದ್ದಾರೆ.

13. ದೂರು ಆಪಾದನೆಯ ಪ್ರಕಾರ, ದೂರನ್ನು ಸಲ್ಲಿಸುವ ಸಮಯದಲ್ಲಿ ಮೊದಲ ಆಪಾದಿತನು ಮಾಜಿ ಮುಖ್ಯಮಂತ್ರಿಯಾಗಿದ್ದು, ಮೂರನೇ ಆಪಾದಿತ/ ಎರಡನೇ ಆಪಾದಿತನು ಕ್ರಿಮಿನಲ್ ಆರ್.ಪಿ. ಸಂ.473/2012 ರ 18.06.2009

ಮತ್ತು 31.08.2009 ರ ನಡುವೆ ಗೃಹ ನಿರ್ಮಾಣ ಮಾಜಿ ಸಚಿವರಾಗಿದ್ದಾರೆ. ಅವರು 24.06.2010 ರಂದು ಮರು ಚುನಾಯಿತರಾಗಿದ್ದರು. 25.09.2009 ರಂದು ಆಪಾದಿತನು ಒಪ್ಪಿಕೊಂಡಿರುವಂತೆ ದೂರಿಗೆ ಪೂರ್ವಾನುಮೋದನೆಯು ಬೆಂಬಲವಿರುವುದಿಲ್ಲ. ಪೂರ್ವ ಮಂಜೂರಾತಿಯಿಲ್ಲದೆ ತೆಗೆದುಕೊಂಡ ಸಂಜ್ಞೇಯತೆಯನ್ನು ಪ್ರತಿಷೇಧಿಸಲಾಗಿದೆ. ***ಸುಬ್ರಮಣಿಯನ್ ಸ್ವಾಮಿ –ವಿರುದ್ಧ– ಮನಮೋಹನ್ ಸಿಂಗ್ ಮತ್ತು ಇತರರು*** [9]***, ಎನ್.ಕೆ. ಗಂಗೂಲಿ –ವಿರುದ್ಧ– ಸಿಬಿಐ*** [10]. ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ದಿನಾಂಕದಂದು ಆಪಾದಿತನು ಲೋಕ ನೌಕರನಾಗಿ ಮುಂದುವರೆಯುತ್ತಿದ್ದರೆ, ಆದರೆ ಅಥವಾ ನಿಂದನೆಗೊಳಗಾಗಿರುವನೆಂದು ಹೇಳಲಾದ ಒಬ್ಬ ಆಪಾದಿತನಿಗಿಂತ ಬೇರೆ ಪದವನ್ನು ಹೊಂದಿದ್ದಲ್ಲಿ ***ಅಭಯ್ ಸಿಂಗ್ ಚೌಟಾಲ –ವಿರುದ್ಧ– ಸಿಬಿಐ*** [11], ಮಂಜೂರಾತಿಯು ಪೂರ್ವ ಅವಶ್ಯಕತೆಯಿರುವುದಿಲ್ಲ. ವಿಶೇಷ ನ್ಯಾಯಾಧೀಶರು ಅಧಿನಿಯಮದ 19ನೇ ಪ್ರಕರಣದ ಮೇರೆಗೆ ಪೂರ್ವ ಮಂಜೂರಾತಿಯ ಅಗತ್ಯದ ಮೇಲೆ ಅಥವಾ ಬೇರೆ ರೀತಿಯಲ್ಲಿ ಲಂಬಿಸುತ್ತಿದ್ದರು ಕೂಡ, ತೆಗೆದುಕೊಂಡ ಸಂಜ್ಞೇಯತೆ ಮತ್ತು ಜಾರಿಗೊಳಿಸಲಾದ ಪ್ರಕ್ರಿಯೆಯು ಪಿ.ಸಿ. ಅಧಿನಿಯಮದ 19 (1) ನೇ ಪ್ರಕರಣವನ್ನು ಸಂಧಿಸುವುದಿಲ್ಲವೆಂದು ಅನುಕೂಲಕರವಾಗಿ ಭಾವಿಸಬಹುದಾಗಿದೆ. ಹಾಗಾಗಿ ಪುನರ್ ಪರಿಶೀಲನಾ ಅರ್ಜಿದಾರರು ಒತ್ತಾಯಿಸಿದ ಮೊದಲನೇ ಆಧಾರವು ವಿಸ್ತೃತಗೊಂಡಿದೆ.

14. ***ವಾಸಂತಿ ದುಬೆರವರ ಪ್ರಕರಣದ (ಮೇಲಿನ)*** ತೀರ್ಪಿನಲ್ಲಿ ಅಪಾರವಾದ ನಂಬಿಕೆಯನ್ನು ಇಟ್ಟಿದ್ದು, ಇದು, ಸಂಹಿತೆಯ 200ನೇ ಪ್ರಕರಣದ ಮೇರೆಗಿನ ಸಂಜ್ಞೇಯತೆಯನ್ನು ಪಡೆದುಕೊಳ್ಳುವ ಮುನ್ನ ಮತ್ತು ಪ್ರಕ್ರಿಯೆಯನ್ನು ಜಾರಿಗೊಳಿಸುವ ಮೊದಲು ಸ್ವತಂತ್ರ ವಿಚಾರಣೆಯ ಅಗತ್ಯತೆಯನ್ನು ಎತ್ತಿಹಿಡಿಯುತ್ತದೆ. ***ಇಂಡಿಯಾ ಕಾರಟ್ (ಪ್ರೈ) ಲಿಮಿಟೆಡ್ –ವಿರುದ್ಧ– ಕರ್ನಾಟಕ ರಾಜ್ಯ*** [12], ಸರ್ವೋಚ್ಚ ನ್ಯಾಯಾಲಯದ ತ್ರಿಸದಸ್ಯ ನ್ಯಾಯಾಧೀಶರ ಪೀಠವು, ಭಾರತೀಯ ದಂಡ ಸಂಹಿತೆಯ 90(1) (ಬಿ)

9. (2012) 3 ಎಸ್‌ಸಿಸಿ 64
10. (2016) ಎಸ್‌ಸಿಸಿ 143
11. (2011)7 ಎಸ್‌ಸಿಸಿ 14
12. (1989) (2) ಎಸ್‌ಸಿಸಿ 132

200, 202 ಮತ್ತು 204ನೇ ಪ್ರಕರಣಗಳ ಮೇರೆಗೆ ದಂಡಾಧಿಕಾರಿಯವರ ಅಧಿಕಾರದ ವಿವರಣೆಗೆ ಸಂಬಂಧಪಟ್ಟಿದ್ದು, ಅದು ಈ ಮುಂದಿನಂತಿದೆ:

> *"16. ಆದುದರಿಂದ ಈಗ ದಂಡಾಧಿಕಾರಿಯವರು, 173(2)ನೇ ಪ್ರಕರಣದ ಮೇರೆಗೆ ಪೋಲಿಸ್ ವರದಿಯನ್ನು ಸ್ವೀಕರಿಸಿದ ಮೇಲೆ ಆಪಾದಿತನ ವಿರುದ್ಧ ಮೊಕದ್ದಮೆಯನ್ನು ದಾಖಲಿಸಲಾಗುವುದಿಲ್ಲ ಎಂಬುದನ್ನು ಪೋಲಿಸು ವರದಿಯು ಜಾರಿಗೊಳಿಸಿದರೂ ಕೂಡ ಸಂಹಿತೆಯ 190(1) (ಬಿ) ಪ್ರಕರಣದ ಮೇರೆಗೆ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳಲು ಹಕ್ಕುಳ್ಳವರಾಗಿರುವುದು ಎಂಬುದು ಸುಸ್ಥಾಪಿತವಾಗಿದೆ. ದಂಡಾಧಿಕಾರಿಗಳು ತನಿಖೆಯ ಅವಧಿಯಲ್ಲಿ ವಿಚಾರಣೆ ನಡೆಸಿದ ಸಾಕ್ಷಿದಾರರ ಹೇಳಿಕೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಬಹುದು ಮತ್ತು ದೂರು ನೀಡಿದ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳಬಹುದು ಮತ್ತು ಆಪಾದಿತನಿಗೆ ಪ್ರಕ್ರಿಯೆಯನ್ನು ಜಾರಿಗೊಳಿಸುವುದನ್ನು ಆದೇಶಿಸಬಹುದು. 190(1) (ಬಿ) ಪ್ರಕರಣವು, ಆಪಾದಿತನ ವಿರುದ್ದ ಪ್ರಕರಣವನ್ನು ತನಿಖೆ ಮಾಡಲಾಗಿದೆಯೆಂದು ತನಿಖಾಧಿಕಾರಿಯು ಅಭಿಪ್ರಾಯ ನೀಡಿದ್ದರೆ ಮಾತ್ರ ದಂಡಾಧಿಕಾರಿಯುವರು ಅಪರಾಧದ ಸಂಜ್ಞೇಯುತೆಯುನ್ನು ತೆಗೆದುಕೊಳ್ಳಬಹುದು ಎಂಬುದನ್ನು ವಿಧಿಸಿರುವುದಿಲ್ಲ. ದಂಡಾಧಿಕಾರಿಯವರು ನೀಡಿದ ನಿರ್ಣಯವನ್ನು ನಿರ್ಲಕ್ಷಿಸಬಹುದು ಮತ್ತು ತನಿಖೆಯಿಂದ ಬಂದ ಸಂಗತಿಗಳನ್ನು ಸ್ವತಂತ್ರವಾಗಿ ವಿವೇಚಿಸಬಹುದು ಮತ್ತು ಸೂಕ್ತವೆಂದು ಭಾವಿಸಿದರೆ, 190(1) ಬಿ ಪ್ರಕರಣದ ಮೇರೆಗೆ ತನ್ನ ಅಧಿಕಾರಗಳನ್ನು ಚಲಾಯಿಸಿ ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು ಮತ್ತು ಆಪಾದಿತನಿಗೆ ಪ್ರಕ್ರಿಯೆಯುನ್ನು ಜಾರಿಗೊಳಿಸಲು ನಿರ್ದೇಶಿಸಬಹುದು. ದಂಡಾಧಿಕಾರಿಯವರು 200 ನೇ ಪ್ರಕರಣ ಅಥವಾ 202ನೇ ಪ್ರಕರಣದ ಅಡಿಯುಲ್ಲಿ ಕೂಡ ಕಾರ್ಯನಿರ್ವಹಿಸಬೇಕೆಂದು ತಾನೂ*

*ಅಭಿಪ್ರಾಯಪಟ್ಟಿದ್ದರೂ ಕೂಡ 190(1)(ಎ) ಪ್ರಕರಣದ ಮೇರೆಗೆ ಪ್ರಕರಣವನ್ನು ಸಂಜ್ಞೇಯತೆಗೆ ತೆಗೆದುಕೊಳ್ಳುವುದಕ್ಕೆ ಸಂಹಿತೆಯನ್ನು 200 ಮತ್ತು 202ನೇ ಪ್ರಕರಣಗಳಲ್ಲಿ ವಿಧಿಸಲಾದ ಪ್ರಕ್ರಿಯೆಯನ್ನು ಅನುಸರಿಸುವಂಥ ಸನ್ನಿವೇಶಕ್ಕೆ ಬದ್ಧರಾಗಿರುವುದಿಲ್ಲ. ಆದುದರಿಂದ ಉಚ್ಚ ನ್ಯಾಯಾಲಯವು, ಎರಡನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಯುವರು, ಎರಡನೇ ಎದುರುದಾರನ ವಿರುದ್ಧ ಪ್ರಕರಣವನ್ನು ದಾಖಲು ಮಾಡಲು ಸೂಚಿಸಲು ಮತ್ತು ಅವನಿಗೆ ಸಮನುಗಳನ್ನು ಹೊರಡಿಸಲು ಆದೇಶಿಸುವ ಹಕ್ಕುಳ್ಳವರಾಗಿರಲಿಲ್ಲ ಎಂಬ ತಪ್ಪು ದೃಷ್ಟಿಯನ್ನು ತಳೆದಿರುತ್ತದೆ."*

15. ***ವಾಸಂತಿ ದುಬೆಯವರ ಪ್ರಕರಣದಲ್ಲಿ (ಮೇಲಿನ)*** ಪ್ರಕ್ರಿಯೆಯನ್ನು ಜಾರಿಗೊಳಿಸುವ ಮೊದಲು ಸ್ವತಂತ್ರ ವಿಚಾರಣೆಯನ್ನು ಮಾಡಬೇಕಾದುದರ ಸಂಬಂಧ ಕಾನೂನನ್ನು ವಿಧಿಸುವಾಗ, ಸದರಿ ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳನ್ನು ***ಇಂಡಿಯಾ ಕಾರಟ್ (ಮೇಲಿನ)*** ಪ್ರಕರಣದಿಂದ ಪ್ರತ್ಯೇಕಿಸಿರುವುದಿಲ್ಲ, ಸದರಿ ಪ್ರಕರಣಕ್ಕೆ ಸಂಬಂಧಪಟ್ಟಿರಲಿಲ್ಲ. ಹೀಗಾಗಿ ***ಇಂಡಿಯಾ ಕಾರಟ್ (ಮೇಲಿನ)*** ತೀರ್ಪನ್ನು ಸರ್ವೋಚ್ಚ ನ್ಯಾಯಾಲಯದ ಸಮಗ್ರ ಪೀಠವು ***ವಾಸಂತಿ ದುಬೆ (ಮೇಲಿನ)*** ತೀರ್ಪನ್ನು ಎತ್ತಿ ಹಿಡಿದಿದೆ. ಇದೇ ಕಾನೂನು ಸ್ಥಾನವನ್ನು ಸರ್ವೋಚ್ಚ ನ್ಯಾಯಾಲಯವು ತನ್ನ ನಂತರ ತೀರ್ಪಿನಲ್ಲಿ ಎಂದರೆ ***ಒರಿಸ್ಸಾ ರಾಜ್ಯ –ವಿರುದ್ಧ– ಹಬೀಬುಲ್ಲಾ ಖಾನ್***[13] ಪುನರುಚ್ಚರಿಸಿದೆ ಮತ್ತು ದಂಡಾಧಿಕಾರಿಯವರು ತನಿಖಾ ಅವಧಿಯಲ್ಲಿ ಪೊಲೀಸರು ಪರಿಶೀಲಿಸಿದ ಸಾಕ್ಷಿದಾರರ ಹೇಳಿಕೆಗಳನ್ನು ಪರಿಗಣನೆಗೆ ತಗೆದುಕೊಳ್ಳಬಹುದೆಂದು ಮತ್ತು ದೂರಲಾದ ಅಪರಾಧವನ್ನು ಸಂಜ್ಞೇಯತೆಗೆ ತೆಗೆದುಕೊಳ್ಳಬಹುದೆಂದು ಮತ್ತು ಆಪಾದಿತನಿಗೆ ಪ್ರಕ್ರಿಯೆಯನ್ನು ಜಾರಿಗೊಳಿಸಲು ಆದೇಶ ಹೊರಡಿಸಬಹುದೆಂದು ಅಭಿಪ್ರಾಯಪಟ್ಟಿತ್ತು. ವಿಷಯದ ಆ ದೃಷ್ಟಿಯಿಂದ, ಈ ಪುನರವಲೋಕನಗಳನ್ನು ತರಲಾದ ಎರಡನೇ ಆಧಾರಕ್ಕೆ ಯಾವುದೇ ಸಮರ್ಥನೆಯಿರುವುದಿಲ್ಲ.

13. (2003) 12 ಎಸ್‌ಸಿಸಿ 129

16. ಹಾಗಾಗಿ ನಾವು ಮೂರನೇ ಕಾರಣಕ್ಕೆ ಬಂದರೆ, ಎಂದರೆ, ವಿಶೇಷ ನ್ಯಾಯಾಧೀಶರ ವಿವೇಚನೆಯನ್ನು ಬಳಸಿರುವುದಿಲ್ಲ ಮತ್ತು ಅಪಾದಿತನಿಗೆ ಸಮನುಗಳನ್ನು ಹೊರಡಿಸಲು ಮೊದಲ ನೋಟದ ಪ್ರಕರಣದ ಅಸ್ತಿತ್ವ ಕುರಿತಂತೆ ಅವನ ತೃಪ್ತಿಯನ್ನು ಆದೇಶವು ಪ್ರಕಟಿಸುವುದಿಲ್ಲ.

ಅಧಿನಿಯಮದ ಯೋಜನೆಯು, ಸರ್ಕಾರಿ ನೌಕರರಿಗೆ ಲಂಚಕೋರತನ ಮತ್ತು ಭ್ರಷ್ಟಚಾರದ ಅಪರಾಧದ ಶಿಕ್ಷೆಯನ್ನು ನೀಡುವುದಾಗಿ 7ನೇ ಪ್ರಕರಣವು ಸರ್ಕಾರಿ ಕಾರ್ಯಕ್ಕೆ ಸಂಬಂಧಿಸಿದಂತೆ ಕಾನೂನು ಸಂಭಾವನೆಯನ್ನು ಹೊರತುಪಡಿಸಿ ತೃಪ್ತಿಯನ್ನು ಹೊಂದಿರುವ ಸರ್ಕಾರಿ ನೌಕರರಿಗೆ ಸಂಬಂಧಪಟ್ಟಿದ್ದರೆ, 13ನೇ ಪ್ರಕರಣವು, ಸರ್ಕಾರಿ ನೌಕರನ ಕ್ರಿಮಿನಲ್ ದುರ್ನಡತೆಯ ಅಪರಾಧಕ್ಕೆ ಸಂಬಂಧಿಸಿದ ಶಿಕ್ಷೆಯನ್ನು ರೂಪಿಸುವುದಾಗಿದೆ, 10 ಮತ್ತು 11ನೇ ಪ್ರಕರಣಗಳು ಅನುಕ್ರಮವಾಗಿ ಅಧಿನಿಯಮದ 8 ಮತ್ತು 9ನೇ ಪ್ರಕರಣಗಳ ಮೇರೆಗೆ ಪರಿಭಾವಿಸಲಾದ ಅಪರಾಧದ ದುಷ್ಪ್ರೇರಣೆಗೆ ಸಂಬಂಧಿಸಿದ ಶಿಕ್ಷೆಯನ್ನು ಮತ್ತು ಪ್ರತಿಫಲ ಪಡೆಯದೆ ಮೌಲ್ಯಯುತವಾದವುಗಳನ್ನು ಸ್ವೀಕರಿಸುವುದನ್ನು ಉದ್ದೇಶಿಸಿರುತ್ತದೆ. ಅಧಿನಿಯಮದ 8 ಮತ್ತು 9ನೇ ಪ್ರಕರಣಗಳ ಮೂಲಕ, ಸರ್ಕಾರಿ ನೌಕರನನ್ನು ಪ್ರಭಾವಿಸಲು/ ಸರ್ಕಾರಿ ನೌಕರನೊಂದಿಗೆ ವೈಯಕ್ತಿಕ ಪ್ರಭಾವನ್ನು ಚಲಾಯಿಸಲು ಲಂಚ ಪಡೆಯುವ ಇತರರನ್ನು (ಯಾರಾದರೂ) ದಂಡನೆಗೆ ಒಳಪಡಿಸಲಾಗಿರುತ್ತದೆ.

17. ಇಲ್ಲಿ ಯಾವ ಪ್ರವರ್ಗದ ಅಡಿಯಲ್ಲಿ, ಪುನರವಲೋಕನ ಅರ್ಜಿದಾರರು ಬರುವರು ಎಂಬುದು ಕುತೂಹಲಕಾರಿಯಾದ ಪ್ರಶ್ನೆಯಾಗಿದೆ? ಕ್ರಿಮಿನಲ್ ರಿಟ್ ಅರ್ಜಿ ಸಂಖ್ಯೆ. 473/2012 ರ ಎರಡನೇ ಅರ್ಜಿದಾರನು ಆಪಾದಿತ ಅಪರಾಧದ ಸಮಯದಲ್ಲಿ ಸರ್ಕಾರಿ ನೌಕರನ ಸಾಮರ್ಥ್ಯದ ಅಡಿಯಲ್ಲಿ ಕಾರ್ಯನಿರ್ವಹಿಸಿಲ್ಲ ಮತ್ತು ಅವನ ವಿರುದ್ಧ ಸಂಜ್ಞೇಯತೆಯನ್ನು ತೆಗೆದುಕೊಳ್ಳಲು ಪೂರ್ವ ಮಂಜೂರಾತಿ ಅಪೇಕ್ಷಿತವಾಗಿರುವುದಿಲ್ಲ, ಅವನು ಆಗ ಅಧಿನಿಯಮದ 8 ಅಥವಾ 9ನೇ ಪ್ರಕರಣದ ಪ್ರವರ್ಗಗಳ ಅಡಿಯಲ್ಲಿ ಬರುವನು. ಕ್ರಿಮಿನಲ್ ರಿಟ್ ಅರ್ಜಿ ಸಂ. 473/2012 ಇಬ್ಬರು ಅರ್ಜಿದಾರರು, ಹಾಗೆಯೇ ಸರ್ಕಾರಿ ನೌಕರರಾಗಿರುವುದಿಲ್ಲ,

ಅಧಿನಿಯಮದ 8 ಅಥವಾ 9 ನೇ ಪ್ರಕರಣದ ಅಂಶಗಳಿಂದ ಅವರ ವಿರುದ್ಧದ ಆಪಾಧಿತ ಕೃತ್ಯಗಳ ಮನವರಿಕೆ ಆಗದ ಹೊರತು, ಅವರು ವಿಶೇಷ ನ್ಯಾಯಾಲಯದ ವೇದಿಕೆಯಲ್ಲಿ ನಿರ್ವಹಿಸಲು ಸಾಧ್ಯವಿಲ್ಲವೆಂಬುದನ್ನು ಅನುಸರಿಸುತ್ತದೆ.

18. ಮಾನ್ಯ ವಿಶೇಷ ನ್ಯಾಯಾಧೀಶರು, ತಮ್ಮ ಆದೇಶದ ವಿಷಯದಲ್ಲಿ, ತಾನು ಅಪರಾಧಗಳಿಗಾಗಿ ಸಮನುಗಳನ್ನು ಹೊರಡಿಸಿದ್ದೇನೆ ಎಂಬುದರ ಸಂಬಂಧ ಎಂದರೆ ಭಾರತೀಯ ದಂಡ ಸಂಹಿತೆಯ 120–ಬಿ ಪ್ರಕರಣದೊಂದಿಗೆ ಓದಲಾದ 406, 409, 420, 463, 464, 468, 471ನೇ ಪ್ರಕರಣಗಳ, ಅಧಿನಿಯಮದ 13(2)ನೇ ಪ್ರಕರಣದೊಂದಿಗೆ ಓದಲಾದ 13(1) (ಸಿ) ಮತ್ತು (ಡಿ) (1) ರ ಪ್ರಕರಣಗಳ, ಕರ್ನಾಟಕ ಭೂ (ವರ್ಗಾವಣೆ ನಿರ್ಬಂಧ) ಅಧಿನಿಯಮ 1991 ರ 91ನೇ ಪ್ರಕರಣದೊಂದಿಗೆ ಓದಲಾದ 3, 4 ಮತ್ತು 5ನೇ ಪ್ರಕರಣಗಳ ಸಂಬಂಧ ಸಮನುಗಳನ್ನು ಹೊರಡಿಸಲಾಗಿದೆ ಎಂಬುದಕ್ಕೆ ಸಂಬಂಧಿಸಿದಂತೆ ಮೊದಲ ನೋಟದ ಪ್ರಕರಣದ ಅಸ್ತಿತ್ವದ ಬಗ್ಗೆ ತಮ್ಮ ತೃಪ್ತಿಯನ್ನು ದಾಖಲಿಸುವ ಪ್ರಯತ್ನ ಮಾಡಿರುವುದಿಲ್ಲ. ವಿಶೇಷ ನ್ಯಾಯಾಧೀಶರ ಸಂಪೂರ್ಣ ಕಸರತ್ತು ಬಹು ಉದ್ದೇಶ ಅಭಿಪ್ರಾಯದೊಂದಿಗೆ ತನಿಖಾಧಿಕಾರಿಯು ಸಲ್ಲಿಸಿದ 'ಸಿ' ಅಂತಿಮ ವರದಿಯನ್ನು ತಿರಸ್ಕರಿಸುವುದು ಮಾತ್ರವಾಗಿದ್ದು ತನಿಖಾಧಿಕಾರಿಯು ಸಂಗ್ರಹಿಸಿದ ದಸ್ತಾವೇಜುಗಳು ಆಪಾದನೆಯನ್ನು ಪುಷ್ಟೀಕರಿಸುವಂಥವಾಗಿದ್ದವು, ಹೀಗಿದ್ದರೂ ಸಹ, ಮಾನ್ಯ ಸತ್ರ ನ್ಯಾಯಾಧೀಶರು, ಕೆಎಲ್ಆರ್‌ಟಿ ಅಧಿನಿಯಮ ಮತ್ತು ಭಾರತೀಯ ದಂಡ ಸಂಹಿತೆ ಇದರ ಸಂಬಂಧ ಸಮನುಗಳನ್ನು ಹೊರಡಿಸಲಾಗಿದ್ದು, ಅಧಿನಿಯಮದ ಮೇರೆಗೆ ಅಪರಾಧಗಳ ನಾಲ್ಕೂ ಆಯಾಮಗಳೊಳಗೆ ಇಲ್ಲಿ ಬರುವ ಅರ್ಜಿದಾರರ ವಿರುದ್ಧ ಹೇಗೆ ಕೃತ್ಯಗಳನ್ನು ಆಪಾದಿಸಲಾಗಿದೆ ಎಂಬ ಕಾರಣವನ್ನು ಸಹಮತಿಸಿದರು.

19. ***ಪೆಪ್ಸಿ ಫುಡ್ ಲಿಮಿಟೆಡ್ –ವಿರುದ್ಧ– ಜುಡಿಶಿಯಲ್ ಮಾಜಿಸ್ಟ್ರೇಟ್***[14] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಹಂತದ ಪ್ರಾಮುಖ್ಯತೆಯನ್ನು ಎತ್ತಿಹಿಡಿದಿದ್ದು, ಮ್ಯಾಜಿಸ್ಟ್ರೇಟ್ ರವರು ಆಪಾದಿತ ಅಪರಾಧಗಳ ಸಂಬಂಧದಲ್ಲಿ

14. 1998 (5) ಎಸ್‌ಸಿಸಿ 749

ಆಪಾದಿತ ವ್ಯಕ್ತಿಗಳಿಗೆ ಸಮನುಗಳನ್ನು ಹೊರಡಿಸಿದ್ದಾರೆ, ಪ್ಯಾರಾ 28 ಈ ಸಂದರ್ಭಕ್ಕೆ ಸಂಬಂಧಪಟ್ಟಿದ್ದು. ಈ ಮುಂದಿನಂತೆ ಓದಲಾಗಿದೆ:

> *"28. ಕ್ರಿಮಿನಲ್ ಪ್ರಕರಣದಲ್ಲಿ ಆಪಾದಿತನಿಗೆ ಸಮನುಗಳನ್ನು ಹೊರಡಿಸುವುದು ಗಂಭೀರ ವಿಚಾರವಾಗಿದೆ. ಕ್ರಿಮಿನಲ್ ಕಾನೂನುಗಳನ್ನು ಕ್ರಮದ ವಿಷಯವೆಂದು ಪ್ರಸ್ತಾವವನ್ನು ಮಾಡಲು ಸಾಧ್ಯವಿಲ್ಲ. ಪ್ರಸ್ತಾವ ಮಾಡಲಾದ ಕ್ರಿಮಿನಲ್ ಕಾನೂನಿನಲ್ಲಿ ಹೇಳಲಾದ ದೂರಿನಲ್ಲಿ ಅವನ ಆಪಾದನೆಗಳನ್ನು ಬೆಂಬಲಿಸಲು ದೂರುದಾರನು, ಇಬ್ಬರು ಸಾಕ್ಷಿದಾರರನ್ನು ಮಾತ್ರ ತರಬೇಕು ಎಂಬುದಾಗಿರುವುದಿಲ್ಲ. ಆಪಾದಿತನಿಗೆ ಸಮನುಗಳನ್ನು ಹೊರಡಿಸಿರುವ ಮ್ಯಾಜಿಸ್ಟ್ರೇಟನ ಆದೇಶವು, ಅವನ ಪ್ರಕರಣದ ಸಂಗತಿಗಳನ್ನು ವಿವೇಚಿಸಿದ್ದಾನೆಂಬುದನ್ನು ಮತ್ತು ಅದಕ್ಕೆ ಅನ್ವಯವಾಗಬಹುದಾದ ಕಾನೂನನ್ನು ಬಿಂಬಿಸಲೇಬೇಕು ಅವನು ದೂರಿನಲ್ಲಿ ಮಾಡಲಾದ ಆಪಾದನೆಗಳ ಸ್ವರೂಪವನ್ನು ಮತ್ತು ಅದರ ಸಮರ್ಥನೆಯಲ್ಲಿ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯಗಳೆರಡನ್ನೂ ಪರೀಕ್ಷಿಸಬೇಕು ಮತ್ತು ಆಪಾದಿತನ ಆರೋಪವನ್ನು ಸಾಬೀತುಪಡಿಸಲು ಯಶಸ್ವಿಯಾಗಲು ದೂರುದಾರನಿಗೆ ಸಾಕಷ್ಟಿರುತ್ತದೆ. ಮ್ಯಾಜಿಸ್ಟ್ರೇಟ್ ರವರು ಅಪಾದಿತನಿಗೆ ಸಮನು ಮಾಡುವ ಮೊದಲು ಪ್ರಾರಂಭಿಕ ಸಾಕ್ಷ್ಯದ ದಾಖಲೆಯ ಸಮಯದಲ್ಲಿ ಮೂಕವೀಕ್ಷಕರಾಗಿದ್ದಾರೆ. ಮ್ಯಾಜಿಸ್ಟ್ರೇಟ್‌ರವರು ದಾಖಲೆಯಲ್ಲಿರುವ ಸಾಕ್ಷ್ಯವನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು ಮತ್ತು ಆಪಾದನೆಗಳ ಸತ್ಯಾಸತ್ಯತೆಯನ್ನು ಶೋಧಿಸಲು ಉತ್ತರಗಳನ್ನು ಹೊರತೆಗೆಯಲು ಅಥವಾ ಇತರ ರೀತಿಯಲ್ಲಿ ದೂರುದಾರನಿಗೆ ಮತ್ತು ಸಾಕ್ಷಿದಾರರಿಗೆ ಪ್ರಶ್ನೆಗಳನ್ನು ಅವರೇ ಹಾಕಬಹುದು ಮತ್ತು ಆಪಾದಿತನ ಎಲ್ಲಾ ಅಥವಾ ಯಾವುದೇ ಅಪರಾಧವನ್ನು ಮಾಡಿರುವುದು ಮೊದಲ ನೋಟಕ್ಕೆ ಕಂಡುಬಂದರೆ ಅದನ್ನು ಪರೀಶಿಲಿಸಬಹುದು."*

20. ***ಮೆ॥ ಜಿಎಚ್‌ಸಿಎಲ್ ನೌಕರರ ದಾಸ್ತಾನು ಆಯ್ಕೆ ಟ್ರಸ್ಟ್‌ಗಳ ಪ್ರಕರಣದಲ್ಲಿ (ಮೇಲಿನ)*** ಆಪಾದಿತನ ವಿರುದ್ಧದ ಮೊದಲ ನೋಟದ ಪ್ರಕರಣ ಕುರಿತು ಸಮನುಗಳನ್ನು ಹೊರಡಿಸುವ ಅವನ ಆದೇಶದಲ್ಲಿ ಅವನ ಖಾತ್ರಿಯನ್ನು ದಾಖಲಿಸದಿರುವ ಸಂಬಂಧ ದಂಡಾಧಿಕಾರಿಯವರ ಕಡೆಯಿಂದಾದ ಲೋಪವನ್ನು ಮತ್ತು ಅವರ ಅಧಿಕೃತ ಸಾಮರ್ಥ್ಯದಲ್ಲಿ ಅವರು ನಿರ್ವಹಿಸಿದ ಪಾತ್ರವನ್ನು ಬಲಯುತವಾಗಿ ಗಮನಕ್ಕೆ ತೆಗೆದುಕೊಳ್ಳಲಾಗಿತ್ತು.

21. ಪ್ಯಾರಾ 48ರಲ್ಲಿರುವ ***ಸುನಿಲ್ ಭಾರತಿ ಮಿತ್ತಲ್***ರವರ ಪ್ರಕರಣದಲ್ಲಿ ಹೀಗೆ ಅಭಿಪ್ರಾಯಪಡಲಾಗಿತ್ತು:

> "48 ಅಪರಾಧದ ಸಂಜ್ಞೇಯುತೆಯನ್ನು ಪಡೆದುಕೊಳ್ಳಲು ದಂಡಾಧಿಕಾರಿಯವರ ವಿವೇಚನೆಯನ್ನು ಬಳಸುವುದು ಮತ್ತು ಆಪಾದನೆಗಳು ರುಜುವಾತಾದರೆ ಅಪರಾಧ ನಡೆದಿದೆಯೆಂದು ಮನವರಿಕೆ ಮಾಡಿಕೊಳ್ಳುವುದು ಅತ್ಯಗತ್ಯ. ಅದುದರಿಂದ ದೂರನ್ನು ನೀಡಿದ ನಂತರ ಅಥವಾ ಪೊಲೀಸು ವರದಿಯನ್ನು ನೀಡಿದ ನಂತರ ದಂಡಾಧಿಕಾರಿಯವರು ಅಪರಾಧ ನಡೆದಿರುವುದನ್ನು ಬಹಿರಂಗಪಡಿಸಿದ್ದಾರೆಯೇ ಎಂಬ ಬಗೆಗಿನ ಪ್ರಶ್ನೆಯನ್ನು ಪರಿಗಣಿಸಲು ಬದ್ಧರಾಗಿದ್ದು ಈ ಸಂಬಂಧದಲ್ಲಿ ಅಂಥ ಅಭಿಪ್ರಾಯವನ್ನು ನೀಡಬೇಕಾಗುತ್ತದೆ. ಅವನು ಹಾಗೆ ಮಾಡಿದಾಗ ಮತ್ತು ಪ್ರಕ್ರಿಯೆಯನ್ನು ಜಾರಿಮಾಡಲು ನಿರ್ಧರಿಸಿದಾಗ, ಅವನು ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಗಿದೆಯೆಂದು ಹೇಳತಕ್ಕದ್ದು. ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ಹಂತದಲ್ಲಿ ನ್ಯಾಯಾಲಯದ ಮುಂದೆ ಉಳಿದಿರುವ ಏಕೈಕ ಪರಿಗಣನೆ ಏನೆಂದರೆ, ಪ್ರಾಸಿಕ್ಯೂಷನ್ನು ಕಾನೂನು ಕ್ರಮ ಜರುಗಿಸಲು ಯಾವ ಸಾಕ್ಷ್ಯಾಧಾರವನ್ನು ಆಪಾದಿತನಿಗೆ ಪ್ರಸ್ತಾವಿಸಿದೆಯೋ ಆ ಸಾಕ್ಷ್ಯಾಧಾರವು ಮೊದಲ ನೋಟದ ಸಮ್ಮತವಾದ ವಾದವನ್ನು ಬಹಿರಂಗಪಡಿಸಿದೆಯೇ ಅಥವಾ ಇಲ್ಲವೇ ಎಂಬುದನ್ನು ನ್ಯಾಯಿಕವಾಗಿ ಪರಿಗಣಿಸುವುದಾಗಿದೆ."

22. ***ಮಹಮದ್ ಉಲ್ ರೆಹಮಾನ್ –ವಿರುದ್ಧ– ಖಯ್ಯೀರ್ ಮಹಮದ್ ತುಂಡಾ ಮತ್ತು ಇತರರು***[14]**,** ಪ್ರಕರಣದಲ್ಲಿ, ಕಂಡಿಕೆ ಸಂ 21 ಮತ್ತು 22 ರಲ್ಲಿ ಹೀಗೆ ಅಭಿಪ್ರಾಯಪಡಲಾಗಿತ್ತು.

> *"**21.** ದಂಡ ಪ್ರಕ್ರಿಯಾ ಸಂಹಿತೆಯ 190(1) (ಬಿ) ಪ್ರಕರಣದ ಮೇರೆಗೆ ದಂಡಾಧಿಕಾರಿಯವರು, ಪೊಲೀಸ್ ವರದಿಯ ಅನುಕೂಲ ಪಡೆದುಕೊಂಡಿದ್ದಾರೆ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 190(1) (ಸಿ) ಪ್ರಕರಣದ ಮೇರೆಗೆ ಅಪರಾಧ ನಡೆದಿರುವುದರ ಬಗ್ಗೆ ಮಾಹಿತಿಯನ್ನು ಅಥವಾ ತಿಳಿವಳಿಕೆಯನ್ನು ಪಡೆದಿರುತ್ತಾರೆ. ಆದರೆ, ದಂಡ ಪ್ರಕ್ರಿಯಾ ಸಂಹಿತೆಯ 190 (1) (ಎ) ಪ್ರಕರಣದ ಮೇರೆಗೆ, ಅವನು ತನ್ನ ಮುಂದಿರುವ ದೂರಿನ ಬಗ್ಗೆ ಮಾತ್ರ ಮಾಹಿತಿ ಪಡೆದಿರುತ್ತಾನೆ. ಆದುದರಿಂದ ಸಂಹಿತೆಯು 'ದೂರಿನ ಸಂಗತಿಗಳು ಅಂಥ ಅಪರಾಧವನ್ನು ರೂಪಿಸುತ್ತವೆ' ಎಂಬುದನ್ನು ನಿರ್ದಿಷ್ಟಪಡಿಸುತ್ತದೆ. ಆದುದರಿಂದ, ಇದರ ಲಕ್ಷಣದ ಮೇಲೆ ದೂರನ್ನು ನೀಡಿದ್ದರೆ, ಯಾವುದೇ ಅಪರಾಧ ನಡೆದಿರುವುದನ್ನು ಪ್ರಕಟಿಸಿದ್ದರೆ, ದಂಡಾಧಿಕಾರಿಯವರು ದಂಡ ಪ್ರಕ್ರಿಯಾ ಸಂಹಿತೆಯ 190 (1) (ಎ) ಪ್ರಕರಣದ ಮೇರೆಗೆ ಸಂಜ್ಞೇಯತೆಗೆ ತೆಗೆದು ಕೊಳ್ಳತಕ್ಕದಲ್ಲ. ದೂರನ್ನು ತಿರಸ್ಕರಿಸುವುದು ಸರಳವಾಗಿರುತ್ತದೆ."*
>
> *22. ದಂಡ ಪ್ರಕ್ರಿಯಾ ಸಂಹಿತೆಯ 190 (1) (ಎ) ಪ್ರಕರಣದ ಮೇರೆಗೆ ದಂಡಾಧಿಕಾರಿಯವರು ತೆಗೆದುಕೊಂಡ ಕ್ರಮಗಳು, ದಂಡಾಧಿಕಾರಿಯವರು ಸಂಗತಿಗಳು ಮತ್ತು ವಿವರಣೆಗಳಿಗೆ ತಮ್ಮ ವಿವೇಚನೆಯನ್ನು ಬಳಸದಿರುವರೆಂಬುದು ಬಿಂಬಿತವಾಗಬೇಕು ಮತ್ತು ನ್ಯಾಯಾಲಯದ ಮುಂದೆ ಹಾಜರಾಗಲು, ಯಾರ ವಿರುದ್ಧ ಕಾನೂನಿನ*

15. (2015) 12 ಎಸ್‌ಸಿಸಿ 420

*ಉಲ್ಲಂಘನೆಯನ್ನು ಆಪಾದಿಸಲಾಗಿದೆಯೋ ಆ ವ್ಯಕ್ತಿಯನ್ನು ಕೇಳುವ ಮೂಲಕ ವಿಷಯದಲ್ಲಿ ಹೆಚ್ಚಿನ ವ್ಯವಹರಣೆಗೆ ಆಧಾರವಿರುತ್ತದೆಯೆಂದು ಅವನಿಗೆ ಮನದಟ್ಟಾಗಿರಬೇಕು, ವ್ಯವಹರಣೆಗೆ ಸಂಬಂಧಿಸಿದ ಆಧಾರದ ಮನವರಿಕೆ ಎಂಬುದು ದೂರಿನಲ್ಲಿರುವ ಆಪಾದಿತ ಸಂಗತಿಗಳು ಅಪರಾಧವನ್ನು ರೂಪಿಸಿರುತ್ತವೆ ಮತ್ತು ಮೇಲ್ನೋಟಕ್ಕೆ ಈ ನ್ಯಾಯಾಲಯದ ಮುಂದೆ ಆಪಾದಿತನು ಉತ್ತರಿಸಲು ಸಾಧ್ಯವಾಗುವಂತೆ ಮಾಡುತ್ತದೆ. ಆ ಹಂತದಲ್ಲಿ ಯಾವುದೇ ಔಪಚಾರಿಕ ಆದೇಶ ಅಥವಾ ಸಕಾರಣ ಆದೇಶವನ್ನು ಹೊರಡಿಸುವ ಅಗತ್ಯವಿಲ್ಲ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ದೂರನ್ನು ವಜಾಗೊಳಿಸಿದಾಗ ದಂಡ ಪ್ರಕ್ರಿಯಾ ಸಂಹಿತೆಯ 203ನೇ ಪ್ರಕರಣದ ಮೇರೆಗೆ ಹೊರಡಿಸಬೇಕಾದ ಸಕಾರಣ ಆದೇಶವನ್ನು ಸರಳವಾಗಿ ಕಾರಣಗಳನ್ನು ತಿಳಿಸುವ ಅಗತ್ಯವಿರುತ್ತದೆ ಎಂಬುದನ್ನು ದಂಡ ಪ್ರಕ್ರಿಯಾ ಸಂಹಿತೆಯು ಅಗತ್ಯಪಡಿಸುತ್ತದೆ ಮತ್ತೊಂದು ಕಡೆಯಲ್ಲಿ ದಂಡಾಧಿಕಾರಿಯವರು, ತಮ್ಮ ಮುಂದೆ ಸಲ್ಲಿಸಲಾದ ಪ್ರತೀ ಮತ್ತು ಪ್ರತಿಯೊಂದು ದೂರನ್ನು ಸಂಜ್ಞೇಯತೆಗೆ ತಗೆದುಕೊಳ್ಳುವಲ್ಲಿ ಅಂಚೆ ಕಛೇರಿಯಂತೆ ಕಾರ್ಯ ನಿರ್ವಹಿಸಲಾಗುವುದಿಲ್ಲ ಮತ್ತು ಕ್ರಮದ ವಿಷಯವಾಗಿ ಪ್ರಕ್ರಿಯೆಯನ್ನು ಜಾರಿಗೊಳಿಸುತ್ತಾರೆ. ದಂಡಾಧಿಕಾರಿಯವರಿಗೆ ದೂರಿನಲ್ಲಿರುವ ಆಪಾದನೆಗಳ ಅಪರಾಧ ನಡೆದಿದೆಯೆಂದು ಮನದಟ್ಟಾಗಿರುವುದು ದಂಡಾಧಿಕಾರಿಯವರು ಹೊರಡಿಸಿದ ಆದೇಶದಲ್ಲಿ ಸಾಕಷ್ಟು ಸೂಚಕವಾಗಿರಬೇಕು ಮತ್ತು ದಾಖಲಿಸಲಾದ ವಿವರಣೆಗಳೊಂದಿಗೆ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 202ನೇ ಪ್ರಕರಣದ ಮೇರೆಗಿನ ತನಿಖೆಯ ವಿಚಾರಣೆ ಅಥವಾ ವರದಿಯ ಫಲಿತಾಂಶವನ್ನು ಪರಿಗಣಿಸಿದಾಗ ಆಪಾದಿತನು ಕ್ರಿಮಿನಲ್ ನ್ಯಾಯಾಲಯದ ಮುಂದೆ ಉತ್ತರಿಸಬಹುದಾದುದು ಏನಾದರೂ ಇದ್ದರೆ, ಹಾಜರಾಗುವುದಕ್ಕೆ ಪ್ರಕ್ರಿಯೆಯನ್ನು ಜಾರಿಗೊಳಿಸುವ ಮೂಲಕ ದಂಡ ಪ್ರಕ್ರಿಯಾ ಸಂಹಿತೆಯ*

> *204 ನೇ ಪ್ರಕರಣದ ಮೇರೆಗೆ ಆಪಾದಿತನ ವಿರುದ್ದದ ವ್ಯವಹರಣೆಗೆ ಆಧಾರವಿರುತ್ತದೆ, ದಂಡ ಪ್ರಕ್ರಿಯಾ ಸಂಹಿತೆಯ 190/204 ನೇ ಪ್ರಕರಣದ ಮೇರೆಗೆ ದಂಡಾಧಿಕಾರಿಯವರು ಮುಂದುವರಿದಿದ್ದ ಸಂದರ್ಭದಲ್ಲಿ ಅಂಥ ಯಾವುದೇ ಸೂಚನೆಯಿರದಿದ್ದರೆ, ಉಚ್ಚ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಮೇರೆಗೆ, ಕ್ರಿಮಿನಲ್ ನ್ಯಾಯಾಲಯದ ಅಧಿಕಾರವನ್ನು ನಿಂದಿಸುವುದನ್ನು ತಡೆಯುವ ಸಲುವಾಗಿ ತನ್ನ ಅಂತರ್ನಿಹಿತ ಅಧಿಕಾರವನ್ನು ಕೋರಲು ಬದ್ಧವಾಗಿರುತ್ತದೆ. ಕ್ರಿಮಿನಲ್ ನ್ಯಾಯಾಲಯದ ಮುಂದೆ ಹಾಜರಾಗಲು ಕರೆ ನೀಡುವುದು, ಸಮಾಜದಲ್ಲಿ ಒಬ್ಬ ವ್ಯಕ್ತಿಯ ಗೌರವ, ಆತ್ಮ ಗೌರವ ಮತ್ತು ವ್ಯಕ್ತಿತ್ವಕ್ಕೆ ಕುಂದುಂಟು ಮಾಡುವ ಗಂಭೀರ ವಿಚಾರವಾಗಿದೆ. ಆದುದರಿಂದ, ಕ್ರಿಮಿನಲ್ ನ್ಯಾಯಾಲಯದ ಪ್ರಕ್ರಿಯೆಯನ್ನು ಕಿರುಕುಳದ ಆಯುಧವನ್ನಾಗಿ ಮಾಡಿಕೊಳ್ಳತಕ್ಕದ್ದಲ್ಲ.*

23. ಅಧಿನಿಯಮದ ಮೇರೆಗಿನ ವಿಶೇಷ ನ್ಯಾಯಾಧೀಶರ ಅಧಿಕಾರವ್ಯಾಪ್ತಿಯು ಅಧಿನಿಯಮದ 4ನೇ ಪ್ರಕರಣದ ಮೂಲಕ ನಿಯಂತ್ರಿತವಾಗಿದೆ, ವಿಶೇಷ ನ್ಯಾಯಾಧೀಶರು, ಅಧಿನಿಯಮ 3ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ನಿರ್ದಿಷ್ಟ ಪ್ರದೇಶಕ್ಕೆ ಸರ್ಕಾರವು ಅಧಿಕೃತಗೊಳಿಸಿದ ಅಪರಾಧಗಳನ್ನು ಅಧಿವಿಚಾರಿಸಲು ಅಧಿಕಾರವ್ಯಾಪ್ತಿಯನ್ನು ಪಡೆದಿರುತ್ತದೆ. ಅದಕ್ಕೆ ಹೆಚ್ಚುವರಿಯಾಗಿ 4ನೇ ಪ್ರಕರಣದ (3)ನೇ ಉಪ–ಪ್ರಕರಣವು ಅಧಿನಿಯಮದ ಮೇರೆಗಿನ ಅಪರಾಧಗಳನ್ನು ಹೊರತುಪಡಿಸಿದ ಇತರ ಅಪರಾಧಗಳನ್ನು ಅಧಿವಿಚಾರಣೆ ಮಾಡಲು ಅವರನ್ನು ಶಕ್ತಗೊಳಿಸುತ್ತದೆ. ಸಂಬಂಧಪಟ್ಟ ಉಪ–ಪ್ರಕರಣವನ್ನು ಹೀಗೆ ಓದಲಾಗಿದೆ.:

> "4(3) ಯಾವುದೇ ಪ್ರಕರಣವನ್ನು ಅಧಿವಿಚಾರಿಸುವಾಗ, ವಿಶೇಷ ನ್ಯಾಯಾಧೀಶರು, 3ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅಪರಾಧವನ್ನು ಬಿಟ್ಟು ಯಾವುದೇ ಅಪರಾಧವನ್ನು ಸಹ ಅಧಿವಿಚಾರಣೆ

ಮಾಡಬಹುದು, ಇದರೊಂದಿಗೆ, ಆಪಾದಿತನಿಗೆ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರ ಮೇರೆಗೆ ಅದೇ ಅಧಿವಿಚಾರಣೆಯಲ್ಲಿ ವಿಧಿಸಬಹುದು."

24. ಹೀಗಾಗಿ, ಅಧಿನಿಯಮದ ಮೇರೆಗೆ ಉದ್ದೇಶಿಸಲಾದ ಅಪರಾಧದ ವಿವರಣೆಯ ಅಡಿಯಲ್ಲಿ ಬರುವ ಆಪಾದಿತನ ವಿರುದ್ಧದ ಹಲವು ಆಪಾದಿತ ಇತರ ಕೃತ್ಯಗಳ ಪೈಕಿ ಹೊರತುಪಡಿಸಿದ ಯಾವುದೇ ಒಂದನ್ನು ವಿಶೇಷ ನ್ಯಾಯಾಧೀಶರು ಭಾರತೀಯ ದಂಡ ಸಂಹಿತೆ ಅಥವಾ ಇತರ ಯಾವುದೇ ಸಂಬಂಧಿತ ಪರಿನಿಯಮದ ಮೇರೆಗಿನ ಅಪರಾಧಗಳನ್ನು ಅಧಿವಿಚಾರಿಸುವ ಅಧಿಕಾರವ್ಯಾಪ್ತಿಯನ್ನು ಹೊಂದಿರುವುದಿಲ್ಲವೆಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ದುರಾದೃಷ್ಟವಶಾತ್ ಮಾನ್ಯ ವಿಶೇಷ ನ್ಯಾಯಾಧೀಶರು ಈ ವಿಷಯದ ಆಯಾಮವನ್ನು ತಿಳಿಸಿರಲಿಲ್ಲ. ಆಪಾದಿತ ಕೃತ್ಯಗಳು ಯಾವ ಅಪರಾಧವೆಸಗಲು ಕಾರಣವಾಗಿದೆ ಎಂಬ ಬಗ್ಗೆ ತನ್ನ ವಿವೇಚನೆಯನ್ನು ಬಳಸುವ ಯಾವುದೇ ಸೂಚಕವಿರುವುದಿಲ್ಲ. ಪುನರ್ ಪರಿಶೀಲನಾ ಅರ್ಜಿದಾರರ ವಿರುದ್ಧವಾಗಿ ಅಧಿನಿಯಮದ 7 ರಿಂದ 11 ಮತ್ತು 13ನೇ ಪ್ರಕರಣಗಳ ಮೇರೆಗಿನ ಯಾವುದೇ ಅಪರಾಧಗಳ ಒಳಾಂಶಗಳಿಗೆ ಮಾತ್ರ ಅನ್ವಯವಾಗುತ್ತಿದ್ದರೆ. ಭಾರತೀಯ ದಂಡ ಸಂಹಿತೆಯ ಮೇರೆಗೆ ಅಪರಾಧಗಳನ್ನು ಅಧಿವಿಚಾರಿಸಲು ಅವನು ಅಧಿಕಾರವ್ಯಾಪ್ತಿಯನ್ನು ಪಡೆದಿರುತ್ತಾನೆ. ಕೆಎಲ್ಆರ್‌ಟಿ ಅಧಿನಿಯಮದ ಉಪಬಂಧಗಳ ಉಲ್ಲಂಘನೆಯ ಬಗ್ಗೆ ತನಗೆ ಮನದಟ್ಟಾಗಿರುವುದನ್ನು ವ್ಯಕ್ತಪಡಿಸಿಲ್ಲ. ವಿಶೇಷ ನ್ಯಾಯಾಲಯುವು ಪ್ರಾಸಿಕ್ಯೂಷನ್‌ಗೆ ಸರಿಯಾದ ವೇದಿಕೆಯಾಗಿದೆ. ಕಾನೂನುಬಾಹಿರ ಪ್ರಶ್ನಿತ ಆದೇಶಕ್ಕೆ ಪುಷ್ಟಿ ನೀಡಿದೆ.

25. ***ಊರ್ಮಿಳಾ ದೇವಿ***ಯವರ ಪ್ರಕರಣದಲ್ಲಿ (ಮೇಲಿನ) ಸಂಹಿತೆಯ 200 ರಿಂದ 204 ರ ವರೆಗಿನ ಪ್ರಕರಣಗಳ ಮೇರೆಗೆ ತನ್ನ ಅಧಿಕಾರವನ್ನು ಚಲಾಯಿಸಿ ಆಪಾದಿತನಿಗೆ ಪ್ರಕ್ರಿಯೆಯನ್ನು ಜಾರಿಗೊಳಿಸುವ ಅಥವಾ ಸಮನುಗಳನ್ನು ಹೊರಡಿಸುವುದನ್ನು ನಿರ್ಣಯಿಸುವ ದಂಡಾಧಿಕಾರಿಯವರ ಅಂಥ ಆದೇಶವು ಸಂಹಿತೆಯ

482 ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯದ ಅಂತರ್ನಿಹಿತ ಅಧಿಕಾರವ್ಯಾಪ್ತಿಯ ಮೇರೆಗೆ ಯಾವಾಗಲೂ ಪ್ರಶ್ನಿಸುವ ವಿಷಯಕ್ಕೊಳಪಟ್ಟಿರುತ್ತದೆಯೆಂದು ಘೋಷಿಸಲಾಗಿತ್ತು.

26. ಕಾನೂನಿನ ಅಗತ್ಯತೆಗೆ ಅನುಸಾರವಾಗಿ ತನ್ನ ಪ್ರಕಾರ್ಯವನ್ನು ನಿರ್ವಹಿಸುವ ಅಧಿಕಾರ ಪ್ರಾಥಮಿಕ ಪ್ರಾಧಿಕಾರಿಯಾಗಿರುವ ವಿಶೇಷ ನ್ಯಾಯಾಧೀಶರಿಗಿರುತ್ತದೆ, ಆದರೆ ಅಧಿವಿಚಾರಣಾ ನ್ಯಾಯಾಲಯದ ವ್ಯಾಪ್ತಿಯಿಂದ ವಿಷಯುವನ್ನು ತೆಗೆದುಕೊಳ್ಳಲು ಈ ನ್ಯಾಯಾಲಯಕ್ಕೆ ಅಧಿಕಾರವಿರುವುದಿಲ್ಲ. ಈ ನ್ಯಾಯಾಲಯಕ್ಕೆ ಪುನರೀಕ್ಷಣಾ ಅಧಿಕಾರವು, ಕ್ರಿಮಿನಲ್ ನ್ಯಾಯಶಾಸ್ತ್ರದ ಅಂಗೀಕೃತ ನಿಯಮಗಳಿಗನುಸಾರವಾಗಿ ನ್ಯಾಯವನ್ನು ನೀಡಲಾಗಿದೆಯೇ ಎಂಬುದನ್ನು ನೋಡುವುದಾಗಿದೆ ಮತ್ತು ಅಧೀನ ನ್ಯಾಯಾಲಯಗಳು ತಮ್ಮ ಅಧಿಕಾರವ್ಯಾಪ್ತಿಯನ್ನು ಮೀರಬಾರದು ಅಥವಾ ಸಂಹಿತೆಯ ಮೇರೆಗೆ ತಮ್ಮಲ್ಲಿ ನಿಹಿತವಾದ ಅಧಿಕಾರಗಳನ್ನು ನಿಂದಿಸಬಾರದು. ಆ ವಿಷಯದ ಹಿನ್ನೆಲೆಯಲ್ಲಿ ಮೊದಲಿಗೆ ದೂರನ್ನು ಸ್ಪಷ್ಟಪಡಿಸಲು ಅಧೀನ ನ್ಯಾಯಾಲಯಕ್ಕೆ ನಿರ್ದೇಶನ ನೀಡುವುದರೊಂದಿಗೆ ಪ್ರಶ್ನಿತ ಆದೇಶವನ್ನು ತಳ್ಳಿಹಾಕಲು ದೂರನ್ನು ಸ್ವೀಕರಿಸಲು ವಿಶೇಷ ನ್ಯಾಯಾಲಯದ ಬಗ್ಗೆ ತನಿಖಾಧಿಕಾರಿಯು ಸಂಗ್ರಹಿಸಿದ ಸಾಕ್ಷ್ಯ ಮಾಹಿತಿ ಮತ್ತು ತನ್ನ ತರ್ಕಬದ್ಧ ಮುಕ್ತಾಯಕ್ಕೆ ವಿಷಯವನ್ನು ತಗೆದುಕೊಳ್ಳಲು ಪ್ರಸ್ತುತ ಇದು ಸಾಕಾಗುತ್ತದೆ. ವಿಶೇಷ ನ್ಯಾಯಾಧೀಶರು, ಆಪಾದಿತನಿಗೆ ಯಾವ ಅಪರಾಧಗಳನ್ನು ಮಾಡಿರುವುದರ ಸಂಬಂಧದಲ್ಲಿ ಸಮನುಗಳನ್ನು ಹೊರಡಿಸಲಾಗಿದೆ ಎಂದು ಅವನ ಮುಂದೆ ದಾಖಲೆಯಲ್ಲಿ ತನ್ನ ಮನವರಿಕೆಯನ್ನು ದಾಖಲಿಸುವುದೂ ಸಹ ಆಗಿರುತ್ತದೆ.

ಪುನರ್ ಪರಿಶೀಲನಾ ಅರ್ಜಿಗಳನ್ನು ಪುರಸ್ಕರಿಸಲಾಗಿದೆ, ಸಂಜ್ಞೇಯತೆ ತೆಗೆದುಕೊಂಡು ಮತ್ತು ಭಾರತೀಯ ದಂಡ ಸಂಹಿತೆಯ 120ಬಿ ಪ್ರಕರಣದೊಂದಿಗೆ ಓದಲಾದ 406, 409, 420, 463, 464, 468, 471ನೇ ಪ್ರಕರಣಗಳ, ಅಧಿನಿಯಮದ 13(2)ನೇ ಪ್ರಕರಣದೊಂದಿಗೆ ಓದಲಾದ 13(1)(ಸಿ) ಮತ್ತು (ಡಿ)

ಪ್ರಕರಣಗಳು ಕೆಎಲ್‌ಆರ್‌ಟಿ ಅಧಿನಿಯಮದ 9ನೇ ಪ್ರಕರಣಗಳೊಂದಿಗೆ ಓದಲಾದ 3, 4 ಮತ್ತು 5ನೇ ಪ್ರಕರಣಗಳ ಮೇರೆಗಿನ ಅಪರಾಧಗಳಿಗೆ ಸಂಬಂಧಿಸಿದಂಥ ಪುನರ್ ಪರಿಶೀಲನಾ ಅರ್ಜಿದಾರರಿಗೆ ಸಮನುಗಳನ್ನು ಹೊರಡಿಸುವ ಮೂಲಕ ವಿಶೇಷ ನ್ಯಾಯಾಧೀಶರು ಹೊರಡಿಸಿದ ವಿಶೇಷ ಸಿಸಿ ಸಂಖ್ಯೆ 46/2012 (ಪಿಸಿಅರ್ ಸಂ. 25) ದಿನಾಂಕ 13.04.2012ರ ಆದೇಶವನ್ನು ತಳ್ಳಿಹಾಕಲಾಗಿದೆ. ಮಾನ್ಯ ವಿಶೇಷ ನ್ಯಾಯಾಧೀಶರು ಮೇಲಿನ ಅಭಿಪ್ರಾಯೋಕ್ತಿಗಳ ಬೆಳಕಿನಲ್ಲಿ ವಿಷಯವನ್ನು ಪುನಃ ಪರಿಗಣಿಸಲು ನಿರ್ದೇಶಿಸಲಾಗಿದೆ.